ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಏಪ್ರಿಲ್-೨೦೦೬ ಸಂಚಿಕೆ-೯



ದಲಿತ ಸಂಘರ್ಷ ಇನ್ನು ಸಾಕು

ದಲಿತ ಮೈತ್ರಿ ಇನ್ನು ಬೇಕು

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್-೨೦೦೬

ಸಂಪುಟ-೬

ಸಂಚಿಕೆ-೯

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ೪೩೧

ಮಂಡ್ಯ ಜಿಲ್ಲೆ

(08236)298754

e-mail-janapada@yahoo.com

www.janapada.org

ಅಮೇರಿ ಕನ್ನಡತಿಯ ಆಸೆಯ ಲಿಸ್ಟು

ಕರ್ನಾಟಕದಿಂದ
ಅಮೇರಿಕೆಗೆ ಬಂದೆ ವಲಸೆ
ಹಿಂದೆ ಹತ್ತು ನೆನಪುಗಳು
ಮುಂದೆ ಮೂವತ್ತು ಆಸೆ
ಕನ್ನಾಡಿನಲ್ಲಿ ಬೇರು ಬಿಟ್ಟ ಗಿಡಕ್ಕೆ
ಇಲ್ಲೆರಡು ಹೂವರಿಳಿಸುವ ಆಸೆ
ಮಲ್ಲಿಗೆಯ ನೆನೆಯುತ್ತ ಗಾರ್ಡೇನಿಯಾ
ಪರಪ್ಯೂಮು ಧರಿಸುವ ಆಸೆ
ಕರ್ನಾಟಕದಲ್ಲಿ ನಾ ಕಲಿತೆ
ಚೆನ್ನಾಗಿ ಇಂಗ್ಲೀಷು ಭಾಷೆ
ಅಮೆರಿಕೆಯಲ್ಲಿ ಬೆಳೆಯುವ ಎನ್ನ
ಕಂದನಿಗೆ ಕನ್ನಡ ಕಲಿಸುವಾಸೆ
ರೋಕ್-ಅನ್ಡ್-ರೋಲ್ ಗೀತಕ್ಕೆ
ಕುಣಿಯಲು ಮಗಳಿಗೆ ಆಸೆ
ಕರ್ನಾಟಕದಿಂದ ಮುದ್ದಾದ
ಸೊಸೆಯ ತರಲು ತಂದೆಗೆ ಆಸೆ
ಕರ್ನಾಟಕದ ದೇವರ ಪಟಕ್ಕೆ
ಹೂವೇರಿಸುವ ಮಹದಾಸೆ
ಭಾಗ್ಯದ ಲಕ್ಷ್ಮಿ ಬಾರಮ್ಮ, ಡಾಲರ್
ತಾರಮ್ಮ ಎಂಬ ದಿನನಿತ್ಯದಾಸೆ

-ವಿಮಲಾ ಚೆನ್ನಬಸಪ್ಪ

ವಿಚಾರ ದೀಪ್ತಿ

ಮೊಗಲ್ ದೊರೆ ಅಕ್ಬರನ ರಾಜ್ಯದಲ್ಲಿ ಸೇನಾನಿಯಾಗಿದ್ದ ಅಬ್ದುರ್ ರಹೀಮ ಖಾನಖಾನಾ ಹಿಂದಿ ಸಾಹಿತ್ಯದ ದೊಡ್ಡ ಹೆಸರು. ಪರಮ ಕೃಷ್ಣ ಭಕ್ತನಾಗಿದ್ದ ಈತನ ಕಾವ್ಯನಾಮ ರಹೀಮ್. ಇವನು ರಚಿಸಿದ ದೋಹಾರಗಳು, ದ್ವಿಪದಿಗಳು ಹಿಂದಿ ಭಾಷಕರಲ್ಲಿ ಅತ್ಯಂತ ಜನಪ್ರಿಯವಾಗಿವೆ. ಭಕ್ತಿ, ಜ್ಞಾನ, ವೈರಾಗ್ಯ, ಶೃಂಗಾರಗಳ ಬಗ್ಗೆ ಸರಳ ಸುಂದರ ದ್ವಿಪದಿ ರಚಿಸಿ ಮಾನವ ಜೀವನಕ್ಕೆ ಮೇಲ್ಪಂಕ್ತಿ ಹಾಕಿದ್ದಾನೆ. ಈತನ ರಚನೆಗಳನ್ನು ತುಲಸಿದಾಸರ ಕೃತಿಗಳೊಡನೆ ಹೋಲಿಸಲಾಗುತ್ತದೆ.

ಪರಮದಾನಿಯಾದ ಇವನ ಮನೆ ಬಾಗಿಲಿಗೆ ಬಂದವರು ಎಂದೂ ಬರಿಗೈಯಲ್ಲಿ ಹಿಂದಿರುಗಿ ಹೋಗುತ್ತಿರಲಿಲ್ಲವಂತೆ. ಅವನ ಕೊನೆಯ ದಿನಗಳಲ್ಲಿ ರಾಜಾಶ್ರಯ ತಪ್ಪಿ ಕೆಟ್ಟ ಸ್ಥಿತಿಯಲ್ಲಿದ್ದರೂ ರಹಿಮನ ಮನೆ ಬಾಗಿಲಿಗೆ ಯಾಚಕರು ಸಾಲುಗಟ್ಟಿ ನಿಲ್ಲುತ್ತಿದ್ದರಂತೆ. ಆ ಸಂದರ್ಭದಲ್ಲಿ ರಚಿಸಿದ ದ್ವಿಪದಿಯೊಂದು ಹೀಗಿದೆ;

ನದಿಗಳು ಒಣಗಿ ಹೋದರೂ ಜನ ನದಿಯ ಪಾತ್ರವನ್ನು ಅಗೆದು ನೀರನ್ನು ಹುಡುಕುತ್ತಲೆ ಇರುತ್ತಾರೆ. ನೀರು ಸಿಗಬಹುದೆಂಬ ಅವರ ಅಭಿಲಾಷೆ ಮಾತ್ರ ಒಣಗಿದ ನದಿ ನೋಡಿದರೂ ಉಳಿದುಕೊಂಡಿರುತ್ತದೆ.

ರಹಿಮ ಕೊಡುವ ದೃಷ್ಟಾಂತಗಳು, ಉಪಮೆಗಳು ದಿನನಿತ್ಯದ ಜೀವನದಿಂದ ಆಯ್ದು ಕೊಂಡದ್ದು. ಅವು ಸರಳವಾಗಿ ನೇರವಾಗಿ ಮನಮುಟ್ಟುತ್ತವೆ. ಪ್ರಾಣಿ,ಪಕ್ಷಿ,ಕೀಟ, ಮರ, ಗಿಡ, ಬಳ್ಳಿ , ಫಲ, ಮಳೆಗಾಲ, ನದಿ ಇವುಗಳ ಮೂಲಕ ಅತಿಗಹನವಾದ ವಿಷಯಗಳನ್ನು ತಿಳಿಸುತ್ತಾನೆ.

ರಹೀಮ ತನ್ನನ್ನು ಕೃಷ್ಣನೆಂಬ ಚಂದ್ರನನ್ನು ಹುಡುಕುವ ಚಕೋರ ಪಕ್ಷಿ ಎಂದು ಕರೆದುಕೊಂಡಿದ್ದಾನೆ. ದೈವಭಕ್ತಿ ಹೇಗಿರಬೇಕೆಂದರೆ ಹೇಳುತ್ತಾನೆ;
ಆಪ ಹೈತೊ ಹರಿ ನಾಂಹಿ
ಹರಿ ಹೈತೊ ಆಪುನ ನಾಂಹಿ- ನಾನು ಎಂಬುದಿದ್ದರೆ ಹರಿಯಿಲ್ಲ. ಹರಿಯಿದ್ದರೆ ನಾನಿಲ್ಲ. ಕನಕದಾಸರೂ ತಮ್ಮ ಗುರುಗಳಿಗೆ ಕೊಟ್ಟ ಉತ್ತರವೂ ಹೀಗೆಯೇ ಇದೆ. 'ಸ್ವರ್ಗಕ್ಕೆ ಯಾರು ಹೋಗುತ್ತಾರೆ' ಎಂಬ ಪ್ರಶ್ನೆಗೆ 'ನಾ ಹೋದರೆ ಹೋದೇನು' ಎಂಬ ಉತ್ತರದಲ್ಲಿ ಎಲ್ಲಿಯವರೆಗೆ ಅಹಂಭಾವವಿದೆಯೋ ಅಲ್ಲಿಯವರೆಗೆ ದೇವರನ್ನು ಕಾಣಲಾಗದು ಎಂಬ ಸತ್ಯವಡಗಿದೆ.

ಪ್ರೇಮದ ಬಗ್ಗೆ ರಹೀಮ ಹೇಳುತ್ತಾನೆ;

'ಪ್ರೇಮದ ದಾರಿ ಕಷ್ಟದ್ದು ಇರುವೆಗೂ ಕಾಲು ಜಾರುವಂತಹದ್ದು ಈ ದಾರಿಯಲ್ಲಿ ಜನ ಎತ್ತಿನಗಾಡಿ ಹೂಡಿಕೊಂಡು ಹೋಗಲು ಯತ್ನಿಸುತ್ತಾರೆ' ಪ್ರೇಮವೆಂಬುದು ದಾರವಿದ್ದಂತೆ ಅದನ್ನು ಹರಿಯದಿರು ಎಂದು ಎಚ್ಚರಿಸುವ ರಹೀಮ ಒಮ್ಮೆ ಹರಿದರೆ ಈ ದಾರ ಕೂಡಿಕೊಳ್ಳದು ಕೂಡಿದರೂ ಗಂಟಾಗುತ್ತದೆ ಎಂದಿದ್ದಾನೆ.

ಇದು ಸಜ್ಜನರ ಸಂಗಕ್ಕೆ ಅನ್ವಯಿಸದು. ಸಜ್ಜನರು ಕೋಪ ಮಾಡಿ ಕೊಂಡರೂ ಅವರ ಸಹವಾಸ ಬಿಡಬೇಡಿರಿ ಮುತ್ತಿನಹಾರ ಹರಿದರೆ ಅದನ್ನು ಮತ್ತೆ ಪೋಣಿಸುವುದಿಲ್ಲವೇ ಹಾಗೇ ಸಜ್ಜನರ ಸಂಗ.

ಸಜ್ಜನರು ದುರ್ಜನರ ಸಂಗದಲ್ಲಿದ್ದರೆ ನಷ್ಟವೆ ಹೊರತು ಲಾಭವಿಲ್ಲ. ಬೋರೆ ಹಣ್ಣಿನ ಗಿಡದ ಪಕ್ಕದಲ್ಲಿ ಬಾಳೆಯ ಗಿಡವಿದ್ದರೆ ಬಾಳೆಯ ಎಲೆ ಕಾಂಡ ಮುಳ್ಳಿನಿಂದ ಹರಿಯುತ್ತವೆಯೇ ಹೊರತು ಮುಳ್ಳು ತುಂಬಿದ ಬೋರೆ ಗಿಡಕ್ಕೆ ಯಾವ ಹಾನಿಯೂ

೧೫ನೇ ಪುಟ ನೋಡಿ......

ದಲಿತ ಸಂಘರ್ಷ ಇನ್ನು ಸಾಕು ದಲಿತ ಮೈತ್ರಿ ಇನ್ನು ಬೇಕು

-ಸುರೇಂದ್ರ ಕೌಲಗಿ

(ಏಪ್ರಿಲ್ ೧೪ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಜನ್ಮದಿನೋತ್ಸವದ ಸಂದರ್ಭದಲ್ಲಿ ಈ ವೈಚಾರಿಕ ಕಾಣಿಕೆ.)

ಸುತ್ತಲಿನ ಪ್ರಪಂಚವು ನನ್ನತ್ತ ಮಿತ್ರನ ದೃಷ್ಟಿಯಿಂದ ನೋಡಬೇಕೆಂದು ಬಯಸಿದಲ್ಲಿ ನಾನೂ ಪ್ರಪಂಚದತ್ತ ಮಿತ್ರನ ದೃಷ್ಟಿಯಿಂದ ನೋಡುವೆನು.
-ಯಜುರ್ವೇದ ೩೬. ೧೮

ಮೈತ್ರಿಯಲ್ಲಿ ಹಕ್ಕೆಂಬುದಿಲ್ಲ, ಕೇವಲ ಕರ್ತವ್ಯವಿರುತ್ತದೆ. -ವಿನೋಬಾ

ದಲಿತರ ಉದ್ಧಾರಕ್ಕಾಗಿ ಡಾ॥ಅಂಬೇಡ್ಕರ್ ಚಳುವಳಿ ಪ್ರಾರಂಭಿಸಿ ತೊಂಭತ್ತೊಂದು ವರ್ಷಗಳಾದವು. ಅಂಥದೇ ಹೋರಾಟವನ್ನು ಗಾಂಧಿ ಪ್ರಾರಂಭಿಸಿ ತೊಂಭತ್ತು ವರ್ಷಗಳಾದವು. ಅಸ್ಪೃಶ್ಯತೆಯು ಸಂವಿಧಾನದ ಆಶಯಕ್ಕೆ ವಿರೋಧವಾದುದೆಂದು ಅದು ಸಾರಿ ಐವತ್ತೇಳು ವರ್ಷಗಳಾದವು. ಸ್ವಾತಂತ್ರ್ಯ ಬಂದು ಐವತ್ತೊಂಭತ್ತು ವರ್ಷಗಳಾದವು, ದಲಿತ ಚಳುವಳಿ ಪ್ರಾರಂಭವಾಗಿ ಮೂವತ್ತುವರ್ಷಗಳಿಗಿಂತ ಹೆಚ್ಚಾದವು. ಕವಿ ಸಿದ್ದಲಿಂಗಯ್ಯನವರ "ಹೊಲೆ ಮಾದಿಗರ ಹಾಡು" ಸಹ ಪ್ರಕಟಗೊಂಡು ಮೂವತ್ತುವರ್ಷಗಳಾದವು. ಈಗ ಅವರು "ಇಕ್ರಲಾ... ವದೀರ್ಲಾ" ತರಹದ ಕವಿತೆಯನ್ನು ಬರೆಯುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ದಲಿತರ ಮೇಲಿನ ದೌರ್ಜನ್ಯ ನಿಂತಿಲ್ಲ. ಅವರಿಗೆ ಆಗುತ್ತಿರುವ ಅವಮಾನ ಮುಂದುವರೆದಿದೆ ಅವರ ಶೋಷಣೆಯೂ ಅಭಾದಿತವಾಗಿ ನಡೆಯುತ್ತಿದೆ. ಅವರ ಮಕ್ಕಳು ಮಾನಸಿಕವಾಗಿ ಕೀಳರಿಮೆಯನ್ನು ಅನುಭವಿಸುತ್ತಿದ್ದಾರೆ. ೧೯೦೦ ರ ದಶಕಗಳಲ್ಲಿ ಡಾ॥ ಅಂಬೇಡ್ಕರ್ ದಲಿತರ ಯಾವ ಸಾಮಾಜಿಕ ಪಾಡುಗಳಿಂದ ರೋಸಿಹೋಗಿ, ಕೋಪಗೊಂಡು ಉದ್ವಿಗ್ನರಾಗಿ ಪ್ರತಿಭಟನೆಯ ದಾರಿಗಿಳಿದಿದ್ದರೊ ಅಂಥದೆ ಪಾಡನ್ನು ಅರ್ಧಶತಮಾನದ ನಂತರವೂ ಸ್ವತಂತ್ರಭಾರತದಲ್ಲಿ ದಲಿತರು ಅನುಭವಿಸಬೇಕಾಗುತ್ತಿರುವುದು ಮನುಷ್ಯರೆಂದು ಕರೆದುಕೊಳ್ಳುವವರು ತಲೆತಗ್ಗಿಸಬೇಕಾದ ಸಂಗತಿಯಾಗಿದೆ.

ಇಂದು ದಲಿತರ ಸಮಸ್ಯೆ ಕೇವಲ ಸಾಮಾಜಿಕ ಸಮಸ್ಯೆಯಾಗಿರದೆ ರಾಜಕೀಯ ಸಮಸ್ಯೆಯೂ ಆಗಿದೆ. ಆದರೆ ಮೂಲತಃ ಇದು ಸಾಮಾಜಿಕ ಸಮಸ್ಯೆ. ಗಾಯದ ಮೇಲೆ ಉಪ್ಪು ಹಾಕುವಂತೆ ಪರಿಸ್ಥಿತಿ ನಮ್ಮ ಪ್ರಜಾತಾಂತ್ರಿಕವ್ಯವಸ್ಥೆಯಿಂದಲೆ ಆಗಿರುವುದು ದೊಡ್ಡ ಆಘಾತಕಾರಿ ಸಂಗತಿಯಾಗಿದೆ. ನಾವು ಸ್ವ ಇಚ್ಛೆಯಿಂದ ಆಯ್ದುಕೊಂಡ ಪ್ರಜಾಪ್ರಭುತ್ವ ವ್ಯವಸ್ಥೆ ದಲಿತ ಸಮುದಾಯವನ್ನು ರಾಷ್ಟ್ರ ಜೀವನದ ಮುಖ್ಯ ಪ್ರವಾಹಕ್ಕೆ ಸೇರಿಸಿಕೊಳ್ಳಲು ವಿಫಲವಾಗುತ್ತಿದೆ. ಉಪ್ಪು ಸ್ವತಃ ತನ್ನ ರುಚಿಯನ್ನು ಕಳೆದುಕೊಂಡರೆ ಅದಕ್ಕೆ ರುಚಿ ತಂದು ಕೊಡುವವರು ಯಾರು ಎಂಬ ಕ್ಲಿಷ್ಟ ಪ್ರಶ್ನೆಯಂತಿದೆ ನಮ್ಮ ಪ್ರಜಾಪ್ರಭುತ್ವ ಪದ್ಧತಿ ಮತ್ತು ದಲಿತೊದ್ಧಾರದ ವಿಷಯ. ಆದ್ದರಿಂದ ಈಗ ನಾವು ಇಂದಿನ ರಾಜಕೀಯ ವ್ಯವಸ್ಥೆಯಲ್ಲಿಯೇ ಸಾಮಾಜಿಕ ಬದಲಾವಣೆಯನ್ನು ಹೇಗೆ ತರಬೇಕೆಂಬುದರ ಬಗ್ಗೆ

ಆಲೋಚಿಸಬೇಕಾಗಿದೆ. ಸಂಘರ್ಷಗಳಿಗೆ, ಪ್ರತಿಭಟನೆಗಳಿಗೆ ಮತ್ತು ಹೋರಾಟಗಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಾನವಿದೆಯಾದರೂ ಅವುಗಳಿಂದಲೆ ಸಾಮಾಜಿಕ ಪರಿಹಾರಗಳು ಸಾಧ್ಯವಾಗುವಂತಾಗಿದ್ದರೆ ಈ ಐವತ್ತು ವರ್ಷಗಳ ಅವಧಿಯಲ್ಲಿ ನಡೆದ ಅಸಂಖ್ಯಾತ ಚಳುವಳಿಗಳಿಂದ ನಾವೆಲ್ಲರೂ ಬಯಸುತ್ತಿರುವ ಸಾಮಾಜಿಕ ಬದಲಾವಣೆ ಆಗಬೇಕಿತ್ತು. ಆದರೆ ವಸ್ತುತಃ ಆಗಿರುವುದೇನು? ದಲಿತರ ಸಮಸ್ಯೆಯಿರಬಹುದು, ಮಹಿಳೆಯರ ಮೇಲಿನ ದೌರ್ಜನ್ಯದ ಸಮಸ್ಯೆಯೆ ಇರಬಹುದು, ಬಾಲಕಾರ್ಮಿಕರ ಬಿಡುಗಡೆಯ ಪ್ರಶ್ನೆಯೆ ಇರಬಹುದು ಇಂಥ ಸಾಮಾಜಿಕ ಸಮಸ್ಯೆಗಳು ಉಲ್ಬಣಗೊಳ್ಳುತ್ತಾ ಹೋಗುತ್ತಿವೆ. ಸಮಾಜದ ದುರ್ಬಲ ವರ್ಗದವರ ಬೆಂಬಲಕ್ಕಾಗಿ ಸಂವಿಧಾನ ಮತ್ತು ಅದರ ಅಂಗಸಂಸ್ಥೆಗಳಾದ ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗ ಅಹರ್ನಿಶಿ ದುಡಿಯುತ್ತಿವೆ. ಅಲ್ಲದೆ ದೇಶದ ಅಭಿವೃದ್ಧಿ ಯೋಜನೆಯಲ್ಲಿ ಬಹಳಷ್ಟು ಹಣವು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿಯೆ ಮೀಸಲಿಡಲ್ಪಡುತ್ತಿದೆ. ಆದರೂ ದಿನಬೆಳಗಾದರೆ ನಾವು ಪತ್ರಿಕೆಗಳಲ್ಲಿ ದುರ್ಬಲವರ್ಗದವರ ಮೇಲೆ ಮತ್ತು ಹಿಂದುಳಿದವರ್ಗದವರ ಮೇಲೆ ಅನ್ಯಾಯ-ಅತ್ಯಾಚಾರಗಳು ನಡೆಯುವುದನ್ನು ಓದುತ್ತಲೆ ಇದ್ದೇವೆ. ದುರ್ಬಲವರ್ಗದವರೆಲ್ಲರೂ ರಾಜಕೀಯ ಪಕ್ಷಗಳ ಕೈಗೊಂಬೆಗಳಾಗಿದ್ದರೆ ದೇಶದಲ್ಲಿರುವ ಅಲ್ಪಸಂಖ್ಯಾತರೆಂಬ ಹಣೆಪಟ್ಟಿಯನ್ನು ಹೊತ್ತಿರುವ ಸಮುದಾಯಗಳು ಸಹ ರಾಜಕೀಯ ಪಕ್ಷಗಳ ಪ್ರಭಾವಕ್ಕೆ ಒಳಗಾಗಿವೆ. ರಾಜಕೀಯ ಪಕ್ಷಗಳು ದುರ್ಬಲ ವರ್ಗದವರನ್ನು ಓಲೈಸಿದರೆ ದುರ್ಬಲವರ್ಗಗಳೂ ರಾಜಕೀಯ ಪಕ್ಷಗಳನ್ನು ತಮ್ಮಲ್ಲಿರುವ ಮತಗಳ ಬಂಡವಾಳದ ಬಲದಿಂದ ಓಲೈಸಲು ಪ್ರಯತ್ನಮಾಡುತ್ತವೆ. ಪ್ರಜಾಸತ್ತೆಯ ಹೆಸರಿನಲ್ಲಿ ಅಲ್ಪಸಂಖ್ಯಾತರ ವಿರುದ್ಧ ಬಹುಸಂಖ್ಯಾತರ ಓಲೈಕೆ ಸಲ್ಲದೆಂದೂ ಅದೇ ರೀತಿ ಅಲ್ಪಸಂಖ್ಯಾತರು ಬಹುಸಂಖ್ಯಾತರ ವಿರುದ್ಧ ಓಲೈಸುವುದು ಸಹ ಸಲ್ಲದೆಂದೂ ಹೆರಾಲ್ಡ್ ಲಾಸ್ಕಿಯವರು ಹೇಳಿರುವುದು ಇಂದಿನ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಹಳ ಸರಿಯಾಗಿದೆಯೆಂದು ಅನಿಸುತ್ತದೆ. ಡಾ॥ ಅಂಬೇಡ್ಕರರು ಸಹ ಈ ವಿಷಯದಲ್ಲಿ ಲಾಸ್ಕಿಯವರ ಈ ಮಾತನ್ನು ಅನುಮೋದಿಸುತ್ತಾರೆ. ಅವರ ಪ್ರಕಾರ ಸಾಮಾಜಿಕ ಬದಲಾವಣೆಗಾಗಿ ಅಗತ್ಯವಾಗಿರುವ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಸಾರ್ವಜನಿಕ ಪ್ರಜ್ಞೆಬೆಳೆಯಬೇಕು. ಈ ನಿಟ್ಟಿನಲ್ಲಿ ಕಾರ್ಯ ನಡೆಯದೆ ಇರುವುದರಿಂದ ಶೋಷಿತರು ಸುಲಭವಾಗಿ ಚಳುವಳಿ ಅಥವಾ ಸಂಘರ್ಷದ ಕ್ರಮಕೈಗೊಳ್ಳುತ್ತಾರೆ. ಈ ಚಳುವಳಿಗಳು ವ್ಯವಸ್ಥಿತವಾಗಿ ಸಂಘಟಿತವಾಗದೆ ಇರುವುದರಿಂದ ಮತ್ತು ಈ ಚಳುವಳಿಗಳ ನಾಯಕರಲ್ಲಿಯೆ ಏಕಮತ ಇಲ್ಲದೆಇರುವುದರಿಂದ ಮತ್ತು ಆ ನಾಯಕರು ತಮ್ಮ ನಾಯಕತ್ವದಿಂದ ರಾಜಕೀಯ ಲಾಭವನ್ನು ಪಡೆಯಲು ಬಯಸುವುದರಿಂದ ಈ ಚಳುವಳಿ ಮತ್ತು ಹೋರಾಟಗಳು ಸ್ವಲ್ಪ ದೂರ ಸಾಗಿ ಯಾವ ಫಲವನ್ನೂ ಪಡೆಯದೆ ಹೋರಾಟಗಾರರಲ್ಲಿ ನಿರಾಶೆಯ ಮನೋಭಾವ ಮೂಡುತ್ತದೆ. ಜೊತೆಗೆ ಯಾರ ವಿರುದ್ಧ ಈ ಸಂಘರ್ಷ ಅಥವಾ ಚಳುವಳಿ ನಡೆದಿರುತ್ತದೊ ಅವರ ಕೋಪತಾಪಗಳಿಗೆ, ಅಸಹಕಾರಕ್ಕೆ ತುತ್ತಾಗಿ ಇನ್ನೂ ಹೆಚ್ಚಿನ ಸಾಮಾಜಿಕ ಹಿಂಜರಿತವನ್ನು ಅನುಭವಿಸಬೇಕಾಗಿ ಬರುತ್ತದೆ. ಗ್ರಾಮಾಧಾರಿತ ನಮ್ಮ ದೇಶದಲ್ಲಂತೂ ಈ ಮಾತು ಹೆಚ್ಚು ಅನುಭವಕ್ಕೆ ಬರುತ್ತದೆ. ದಲಿತರ ಉದ್ಧಾರದಂಥ ಬಹುಮುಖಿ ಸಮಸ್ಯೆಯ ಪರಿಹಾರ ಕೇವಲ ಏಕಮುಖಿ ಪ್ರಯತ್ನದಿಂದ ಸಾಧ್ಯವಿಲ್ಲ. ಇಡೀ ಸಮಾಜವೇ ಇದರಲ್ಲಿ ತೊಡಗಿಸಿ ಕೊಳ್ಳಬೇಕಾಗುತ್ತದೆ. ಈ ಕಾರ್ಯದಲ್ಲಿ ಪ್ರಭುತ್ವಕ್ಕಿಂತ ಪ್ರಭುಗಳ ಪಾತ್ರ ಅಂದರೆ ಪ್ರಜೆಗಳ

ಪಾತ್ರವೆ ಹಿರಿದಾಗಿದೆ, ಈ ವಿಚಾರವನ್ನು ಚೆನ್ನಾಗಿ ಗ್ರಹಿಸಿದ ಅಂಬೇಡ್ಕರ್ ರವರು "ಪಾರ್ಲಿಮೆಂಟ್, ಅಥವಾ ನ್ಯಾಯಾಂಗವು ಯಾವುದೇ ಹಕ್ಕುಗಳನ್ನು ನಿಜವಾದ ಅರ್ಥದಲ್ಲಿ ಜಾರಿಮಾಡಲು ಸಾಧ್ಯವಿಲ್ಲ" ಎಂದೊಮ್ಮೆ ಹೇಳಿದ್ದರು. ಏಕೆಂದರೆ ಪಾರ್ಲಿಮೆಂಟಾಗಲಿ, ನ್ಯಾಯಾಂಗವಾಗಲಿ, ಯಂತ್ರವತ್ತಾಗಿ ಕೆಲಸಮಾಡಬಲ್ಲವೆ ಹೊರತು ಮಾನವೀಯತೆಯ ಆರ್ದತೆಯನ್ನಿಟ್ಟುಕೊಂಡು ಕೆಲಸ ಮಾಡಲು ಸಾಧ್ಯವಿಲ್ಲ. ಪಾರ್ಲಿಮೆಂಟಿನ ಕಾನೂನುಗಳು, ನ್ಯಾಯಾಂಗದ ತೀರ್ಮಾನಗಳು ಎಷ್ಟೇ ಸಾಮಾಜಿಕ ಕಳಕಳಿಯನ್ನು ಹೊಂದಿದ್ದರೂ ಅನುಷ್ಠಾನದ ಸಮಯದಲ್ಲಿ ಅವು ತಮ್ಮ ಆಶಯಗಳನ್ನು ಕಳೆದುಕೊಂಡಿರುತ್ತವೆ.

ಭಾರತದ ಜನಸಂಖ್ಯೆಯ ಮುಕ್ಕಾಲುಭಾಗ ಜನಸಂಖ್ಯೆ ಗ್ರಾಮಗಳಲ್ಲೆ ಇದೆ. ಗ್ರಾಮಗಳ ಜೀವನ ಜಾತಿ ಶ್ರೇಣಿಗಳಿಂದ ಒಳಗೊಂಡಿದೆಯಾದ್ದರಿಂದ ದಲಿತರ ಸಮಸ್ಯೆ ಪರಿಹಾರ ಕೇವಲ ಕಾನೂನಿನ ಬಲದಿಂದಾಗಲಿ, ಸಂವಿಧಾನದ ಬಲದಿಂದಾಗಲಿ ಪರಿಹಾರಗೊಳ್ಳಲು ಸಾಧ್ಯವಿಲ್ಲ. ತೀವ್ರತಮವಾದ ಸಾಮಾಜಿಕ ಪರಿವರ್ತನೆಯ ಕಾರ್ಯಕ್ರಮಗಳಿಂದ ಮಾತ್ರ ಇದು ಸಾಧ್ಯ. ದುರ್ದೈವವಶಾತ್ ದೇಶದ ಎಲ್ಲ ಧರ್ಮಗಳು ಕದಡಿರುವ ನೀರಿನಲ್ಲಿ ಮೀನು ಹಿಡಿಯುವ ಪ್ರಯತ್ನ ಮಾಡುತ್ತಿವೆ. ರಾಜಕೀಯ ಪಕ್ಷಗಳು ದುರ್ಬಲ ವರ್ಗಗಳ ಜನರಿಂದ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸಿರುವಂತೆಯೇ ಧಾರ್ಮಿಕ ಸಂಘಟನೆಗಳು ತಮ್ಮ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳಲು ಆಸಕ್ತಿವುಳ್ಳದ್ದಾಗಿವೆ. ಯಾವುದೇ ಧರ್ಮದ ಯಾವುದೇ ಧರ್ಮಪೀಠವು ನಿಸ್ವಾರ್ಥಭಾವನೆಯಿಂದ ದುರ್ಬಲ ವರ್ಗಗಳ ಏಳಿಗೆಗಾಗಿ ಕೆಲಸ ಮಾಡುತ್ತಿಲ್ಲ. ಸಂಘರ್ಷ ಅಥವಾ ಮತಾಂತರದಂಥ ಉಪಾಯಗಳೂ ಇಂದು ತಮ್ಮ ವೈಫಲ್ಯವನ್ನು ಕಂಡಿವೆ. ಆದ್ದರಿಂದ ನಮ್ಮ ದೇಶದ ದುರ್ಬಲ ವರ್ಗಗಳ ಜನರು ಅಭಿವೃದ್ಧಿಯಾಗಬೇಕಾದರೆ ನಾವು ರಾಜಕೀಯ ಮಾರ್ಗವನ್ನು, ಪ್ರಭುತ್ವದ ಮಾರ್ಗವನ್ನು, ಧಾರ್ಮಿಕಮಾರ್ಗವನ್ನು ತ್ಯಜಿಸಿ ಹೊಸ ಮೌಲ್ಯಗಳ ಆಧಾರದ ಮೇಲೆ ವಿಶೇಷ ರೂಪದ ಸಾಮಾಜಿಕ ಹೋರಾಟವನ್ನು ಪ್ರಾರಂಭಿಸಬೇಕಿದೆ. ಏಕೆಂದರೆ ವಿನೋಬಾ ಹೇಳುವಂತೆ ಯಾವುದೆ ಒಂದು ಸಾಮಾಜಿಕ ಚಳುವಳಿಯನ್ನು ಒಂದು ಸಂಸ್ಥೆಯ ಚೌಕಟ್ಟಿನಲ್ಲಿಟ್ಟು ಕ್ರಾಂತಿತರಲು ಸಾಧ್ಯವಿಲ್ಲ. ಸಂಸ್ಥೆ ಆ ಚಳುವಳಿಗೆ ತನ್ನ ಸಹಕಾರ ನೀಡಬಹುದಷ್ಟೆ. ಆದರೆ ಕ್ರಾಂತಿಯನ್ನು ತರುವ ಕೆಲಸ ಲೋಕಮಾನಸದ ಪರಿವರ್ತನೆಯಿಂದ ಮಾತ್ರ ಸಾಧ್ಯ. ಈ ಹೊಸರೂಪದ ಹೋರಾಟಕ್ಕೆ ಸನಾತನ ಸಾಮಾಜಿಕ ಮೌಲ್ಯಗಳಾದ ಸತ್ಯ, ಅಹಿಂಸೆ, ಮತ್ತು ಪ್ರೇಮ ಇವುಗಳನ್ನು ಆಧಾರವಾಗಿಟ್ಟುಕೊಳ್ಳಬೇಕಿದೆ. ಇವುಗಳ ಜೊತೆಗೆ ಇನ್ನೊಂದು ಅತಿಮುಖ್ಯವಾದ, ಪರಿಣಾಮಕಾರಿಯಾದ ಮೌಲ್ಯವನ್ನು ಸೇರಿಸಿಕೊಳ್ಳಬೇಕಿದೆ. ಅದು ಮೈತ್ರಿ ಎಂಬ ಮೌಲ್ಯ. ಕೈಗಾರಿಕರಣ, ಶಸ್ತೀಕರಣ ಮುಂತಾದವುಗಳು ಅನಿರ್ಬಂಧಿತವಾಗಿ ಬೆಳೆಯುತ್ತಿರುವಾಗ ಅವುಗಳನ್ನು ತಡೆಯುವ ಶಕ್ತಿ ಮೈತ್ರಿಯ ಭಾವನೆಯಲ್ಲಲ್ಲದೆ ಇನ್ನಾವುದರಲ್ಲೂ ಇಲ್ಲ. ಆದ್ದರಿಂದ ಸವರ್ಣೀಯರು ದಲಿತರನ್ನು ಮೈತ್ರಿ ಭಾವದಿಂದಲೂ, ದಲಿತರು ಸವರ್ಣೀಯರನ್ನು ಮೈತ್ರಿ ಭಾವದಿಂದಲೂ ನೋಡುವ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಮತ್ತು ವ್ಯವಹಾರದ ಚಾತುರ್ಯವನ್ನು ಗಳಿಸಿಕೊಳ್ಳಬೇಕು. ಇದುವರೆಗೆ ನಡೆದಿರುವ ದಲಿತ ಸಂಘರ್ಷಗಳು ಸಾಕು. ಅವು ತಮ್ಮ ಎಲ್ಲ ಮೊನಚನ್ನು, ಅರ್ಥವನ್ನು ಕಳೆದುಕೊಂಡಿವೆ. ಸಂಘರ್ಷದ ಸ್ಥಾನದಲ್ಲಿ ಮೈತ್ರಿ ಆಂದೋಲನವನ್ನು ಸಮಾಜದ ಎಲ್ಲ ವರ್ಗಗಳು ಪರಸ್ಪರರ ಏಳಿಗೆಗಾಗಿ ಪ್ರಾರಂಭಿಸುವಂತಾಗಲಿ. ಅಂಥ ಸುಂದರವಾದ ಮಾನವೀಯತೆಯ ಅರುಣೋದಯಕ್ಕಾಗಿ ನಾವೆಲ್ಲರೂ ಪೂರ್ವದಿಗಂತವನ್ನು ನೋಡೋಣ.

***

ಬಹುಶ್ರುತ ಪ್ರೊ|| ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

–ಕೆ.ಆರ್. ಮೋಹನ್

ಅನೇಕ ಶಾಸ್ತ್ರಗಳಲ್ಲಿ ಉದ್ಧಾಮ ಪಂಡಿತರೂ, ಸಂಸ್ಕೃತ ವ್ಯಾಕರಣ ಮತ್ತು ಸಾಹಿತ್ಯದಲ್ಲಿ ಮಹಾ ವಿದ್ವಾಂಸರೂ, ಸಂಗೀತ–ಚಿತ್ರ–ಶಿಲ್ಪ–ನಾಟ್ಯ ಕಲೆಗಳಲ್ಲಿ ನಿಷ್ಣಾತರೂ, ಉತ್ತಮ ವಾಗ್ಮಿಗಳೂ, ಸಹೃದಯರೂ ಹಾಗೂ ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವೇದ ಶಾಸ್ತ್ರ ನಿಧಿ, ವಿದ್ಯಾವಾಚಸ್ಪತಿ ಪ್ರೊ. ಸಾ.ಕೃ. ರಾಮಚಂದ್ರರಾವ್ ಇವರ ಹೆಸರು ಕರ್ನಾಟಕದಲ್ಲಿ ಚಿರಪರಿಚಿತ.

ಶ್ರೀರಾಯರ ನೇರ ಪರಿಚಯ ನನಗಿಲ್ಲ. ಅವರನ್ನು ಬಲ್ಲವರಿಂದ, ಅವರ ಕೃತಿಗಳ ಮೂಲಕ, ನನ್ನ ವ್ಯಕ್ತಿಗತ ಅನುಭವಗಳಿಂದ ಈ ಲೇಖನ ಬರೆದಿದ್ದೇನೆ. ಸಹೃದಯರಿಗೆ ಮೆಚ್ಚುಗೆಯಾಗಬಹುದು ಎಂಬ ಭರವಸೆ ಇದೆ.

ಅವರು ಬರೆದ ಕೃತಿಗಳಲ್ಲಿ ನನಗೆ ಬಹು ಮೆಚ್ಚಿಗೆಯಾದದ್ದು 'ಶಾರದಾ ಪೀಠದ ಮಾಣಿಕ್ಯ'. ಇದರಲ್ಲಿ ಶೃಂಗೇರಿ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಮಠದ ದಿವಾನರ ದಬ್ಬಾಳಿಕೆಯಿಂದ ಅನುಭವಿಸಿದ ಮಾನಸಿಕ ಯಾತನೆ ಹಾಗೂ ಮೂಕವೇದನೆಗಳನ್ನು ಮನ ಮಿಡಿಯುವಂತೆ ಬರೆದಿದ್ದಾರೆ. ರಾಯರ ಮನಶಾಸ್ತ್ರ ಅಧ್ಯಯನ ವಿಶ್ಲೇಷಣೆ ಈ ಕೃತಿಗೆ ಮೆರುಗನ್ನಿತ್ತಿದೆ.

೧೯೯೮ ಫೆಬ್ರವರಿಯಲ್ಲಿ ಅಂತರರಾಷ್ಟ್ರೀಯ ಖಜುರಾಹೋ ನೃತ್ಯೋತ್ಸವ ನೋಡಲು ನಾನು ಭೋಪಾಲದಿಂದ ಹೊರಟಿದ್ದೆ. ದಾರಿಯಲ್ಲಿ 'ಶಾರದಾ ಪೀಠದ ಮಾಣಿಕ್ಯ' ಓದುತ್ತಿದ್ದೆ. ದಾರಿಯಲ್ಲಿ ಛತ್ತರಪುರದಲ್ಲಿರುವ ನನ್ನ ಇಂಜಿನಿಯರ್ ಸ್ನೇಹಿತರ ಮನೆಗೆ ಹೋದೆ. ನನ್ನ ಸ್ನೇಹಿತರ ಮನೆಯಾಕೆ ನನ್ನ ಕೈಯಲ್ಲಿರುವ ಪುಸ್ತಕ ನೋಡಿ, ನಮ್ಮ ಮಾವ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಆಪ್ತ ಸೇವೆಯಲ್ಲಿದ್ದರು. ತಮ್ಮ ಬಗ್ಗೆ ಈ ಪುಸ್ತಕದಲ್ಲಿ ಪ್ರಸ್ತಾಪವಿದೆ ಎಂದು ನಮ್ಮ ತಂದೆ ಹೇಳಿದ್ದಾರೆ. ನಾನು ಈ ಪುಸ್ತಕಕ್ಕಾಗಿ ಹುಡುಕುತ್ತಿದ್ದೆ. ಎಲ್ಲಿಯೂ ಸಿಕ್ಕಲಿಲ್ಲ. ದಯವಿಟ್ಟು ಈ ಪುಸ್ತಕ ನನಗೆ ಕೊಡುತ್ತೀರಾ ಎಂದು ಕಳಕಳಿಯಿಂದ ಕೇಳಿದರು. ಕೂಡಲೇ ಈ ಪುಸ್ತಕವನ್ನು ಕೊಟ್ಟಾಗ ಒಂದು ನಿಧಿ ಸಿಕ್ಕಿದಷ್ಟು ಸಂತೋಷಪಟ್ಟರು.

ನಾನು ೧೯೯೮ ಅಕ್ಟೋಬರ್‌ನಲ್ಲಿ ಬೆಂಗಳೂರಿಗೆ ಬಂದಿದ್ದಾಗ ಐ.ಬಿ.ಎಚ್. ಪ್ರಕಾಶನದ ಅನಂತರಾಮ್ ಸಾ.ಕೃ.ರಾ. ರಾಯರ ಸಂಪಾದಕತ್ವದಲ್ಲಿ ಕರ್ನಾಟಕ ಸರ್ಕಾರದಿಂದ ಪ್ರಕಟವಾದ "ಪುರಂದರ ದರ್ಶನ"ದ ಒಂದು ಸೆಟ್ ಅನ್ನು ಸ್ನೇಹದ ಕುರುಹಾಗಿ ಕೊಟ್ಟರು. ಭೋಪಾಲದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಸಂಯೋಜಕರು ನನ್ನನ್ನು ಕೇಳದೆ, "ನಾನು ಭಾಷಣ ಮಾಡುತ್ತೇನೆಂದು" ಘೋಷಿಸಿದರು. ನಾನು ಭಾಷಣಕ್ಕೆ ತಯಾರಾಗಿ ಬಂದಿರಲಿಲ್ಲ. ಸುದೈವದಿಂದ ನನ್ನ ಬ್ರೀಫ್‌ಕೇಸಿನಲ್ಲಿ 'ಪುರಂದರ ದರ್ಶನ'ದ

ಒಂದು ಭಾಗವಿತ್ತು. ಅದನ್ನು ಹೊರತೆಗೆದು ಸಭಿಕರಿಗೆ ತೋರಿಸಿ, ಪುಸ್ತಕದ ಪರಿಚಯ, ಸಂಪಾದಕರಾಗಿ ರಾಯರ ಅಪಾರ ಶ್ರಮ, ಕಡಿಮೆ ಬೆಲೆಯಲ್ಲಿ ಪ್ರಕಟಿಸಿದ ಕರ್ನಾಟಕ ಸರಕಾರದ ಶ್ಲಾಘನೀಯ ಕೆಲಸದ ಬಗ್ಗೆ ಮಾತನಾಡಿ ಪ್ರತಿಯೊಬ್ಬ ಕನ್ನಡಿಗನೂ ಇದನ್ನು ಅವಶ್ಯ ಕೊಳ್ಳಬೇಕೆಂದು ಭಾಷಣ ಮಾಡಿದೆ. ಹೀಗೆ ರಾಯರ ಪುಸ್ತಕ ನನಗೆ ಆಪದ್ಬಾಂಧವನಾಯಿತು.

೨೦೦೩ ರಲ್ಲಿ ನಮ್ಮ ಗುರುಗಳು ಪ್ರೊ. ಆರ್.ಕೆ. ಶ್ರೀಕಂಠ ಕುಮಾರಸ್ವಾಮಿಗಳು 'ಸರಳ ವಿವಾಹ ಮತ್ತು ಶಾಸ್ತ್ರಗಳು' ಪುಸ್ತಕ ಬರೆದರು. ವೈದಿಕ ವಿವಾಹದಲ್ಲಿ ಶಾಸ್ತ್ರ ಶುದ್ಧ ಭಾಗ ಯಾವುದು? ಸರಳ ಹಾಗೂ ಸಂಪೂರ್ಣವಿವಾಹ ಕ್ರಮ- ಮೊದಲಾದ ವಿಚಾರಗಳನ್ನು ಸೊಗಸಾಗಿ, ಪ್ರಾಮಾಣಿಕವಾಗಿ, ಧಾರ್ಮಿಕ ಶ್ರದ್ಧೆಯಿಂದ ಸಾತ್ವಿಕ ಕಳಕಳಿಯಿಂದ ಚರ್ಚಿಸಿ ಬರೆದ ಗ್ರಂಥವಿದು. ವಿಷಯಕ್ಕೆ ಪೂರಕವಾಗಿ ಒಂದು ಮುನ್ನುಡಿ ಅಗತ್ಯವಾಗಿತ್ತು. ನನ್ನ ಹಿತೈಷಿಗಳಾದ ಖ್ಯಾತ ಸಂಶೋಧಕರು, ಇತಿಹಾಸ-ಸಂಗೀತ-ಸಾಹಿತ್ಯಗಳಲ್ಲಿ ಬಹುಶ್ರುತರಾದ ಡಾ॥ ವಿ.ಎಸ್. ಸಂಪತ್ಕುಮಾರಾಚಾರ್ಯರು ಶ್ರೀರಾಯರೇ ಇಂತಹ ಗ್ರಂಥಕ್ಕೆ ಮುನ್ನುಡಿ ಬರೆಯಲು ಸರಿಯಾದವರು ಎಂದು ತಿಳಿಸಿದರು. ಅಲ್ಲದೆ, ಸ್ವತಃ ರಾಯರನ್ನು ಸಂಪರ್ಕಿಸಿ, ಏಳು ಪುಟಗಳ ವಿದ್ವತ್ಪೂರ್ಣವೂ, ಬೋಧಪ್ರದವೂ ಆದ ಮುನ್ನುಡಿಯನ್ನು ಬರೆಯಿಸಿ ಕೊಟ್ಟರು. ಈಗ ಜನಪ್ರಿಯವಾಗುತ್ತಿರುವ ಈ ಗ್ರಂಥಕ್ಕೆ ಈ ಮುನ್ನುಡಿ ಮೆರುಗನ್ನು ಕೊಟ್ಟಿದೆ.

ಈ ವರ್ಷ ಬೆಂಗಳೂರಿಗೆ ಹೋಗಿದ್ದಾಗ ಅಭಿಜ್ಞಾನ ಪ್ರಕಾಶನದ ಮಾಲೀಕರಾದ ಸೂರ್ಯಪ್ರಕಾಶ ಪಂಡಿತರು ಶ್ರೀ ರಾಯರು ಬರೆದ 'ಆಂಜನೇಯನ ಕಲ್ಪನೆಯಲ್ಲಿ ಸ್ವಾರಸ್ಯ' ಎಂಬ ಸುಂದರ ಪುಸ್ತಕವನ್ನು ಕೊಟ್ಟರು. ೩೬ ಪುಟಗಳಲ್ಲಿ ಆಂಜನೇಯನ ಬಗ್ಗೆ ಎಲ್ಲಾ ಮಾಹಿತಿಗಳನ್ನೂ, ಅಪರೂಪದ ಚಿತ್ರಗಳನ್ನೂ, ಮಂತ್ರಗಳನ್ನೂ ಕೊಟ್ಟಿದ್ದಾರೆ. ಇದು ಒಂದು ಆಕರ ಗ್ರಂಥ; ಆಂಜನೇಯನ ಭಕ್ತರಿಗೆ ಅಮೂಲ್ಯ ನಿಧಿ. ಬೆಂಗಳೂರಿನ ಆಶಕ್ತ ಪೋಷಕ ಸಭೆಯ ಅಧ್ಯಕ್ಷ ಶ್ರೀ ಬಿ.ಎಲ್. ಎನ್.ಮೂರ್ತಿ ಮತ್ತು ಕುಟುಂಬದವರ ಉಚಿತ ಕೊಡುಗೆ. ನನ್ನಲ್ಲಿದ್ದ ಪುಸ್ತಕವನ್ನು ನೋಡಿ, ಮೈಸೂರಿನ ಹಲವಾರು ಆಂಜನೇಯನ ಭಕ್ತರು ತಮಗೆ ಬೇಕೆಂದು ಆಗ್ರಹ ಮಾಡಿದರು. ನಾನು ಸುಮಾರು ೧೦ ಪ್ರತಿಗಳನ್ನು ತರಿಸಿ ಹಂಚಿದೆ. ಇನ್ನೂ ಪ್ರತಿಗಳನ್ನು ಬೇಡಿದಾಗ ಅವು ಮುಗಿದಿ ಹೋಗಿವೆ ಎಂದು ತಿಳಿದುಬಂತು. ಇದು ಒಂದು ಸಂಗ್ರಹ ಯೋಗ್ಯ ಗ್ರಂಥ.

ಇತ್ತೀಚೆಗೆ ಕರ್ನೂಲಿನಲ್ಲಿರುವ ಮಿತ್ರರಾದ ಗಡಿಯಾರಂ ರಾಮಕೃಷ್ಣ ಶರ್ಮರು ನನಗೆ ಪತ್ರ ಬರೆದು, ಸಾ.ಕೃ.ರಾ.ರಾಯರ 'ಕಲಾತತ್ವ ಮಹರ್ಷಿ ಆನಂದ ಕುಮಾರ ಸ್ವಾಮಿ' ಪುಸ್ತಕವನ್ನು ಕಳುಹಿಸಿಕೊಡಲು ಹೇಳಿದರು. ಶ್ರೀ ಶರ್ಮರು ಉದ್ಧಾಮ ತೆಲಗು ಸಾಹಿತಿ ಹಾಗೂ ಆಂಧ್ರ ಭಾಷಾ ಸಾರಸ್ವತ

ಪರಿಷತ್ತಿನಲ್ಲಿ ಕಾರ್ಯದರ್ಶಿಗಳು. ಅಭಿಜ್ಞಾನ ಪ್ರಕಾಶನದಲ್ಲಿ ಎರಡು ಪ್ರತಿಗಳನ್ನು ಕೊಂಡುಕೊಂಡೆ. ಪುಸ್ತಕವು ಕಿರಿದಾದರೂ (೪೩ ಪುಟ) ಗುಣಮಟ್ಟದಲ್ಲಿ ಬಹಳ ದೊಡ್ಡದು. ಆನಂದ ಕುಮಾರಸ್ವಾಮಿಯವರ ಜೀವನ, ಸಾಧನೆ, ವೇದ-ಸನಾತನಧರ್ಮ-ಭಾರತೀಯ ಕಲೆಗಳ ಬಗ್ಗೆ ಇದ್ದ ಶ್ರದ್ಧೆ, ಗೌರವ, ಆದರಗಳನ್ನು ಮನಮುಟ್ಟುವಂತೆ ರಾಯರು ಬರೆದಿದ್ದಾರೆ. ಸ್ವತಃ ಬರೆದ ಚಿತ್ರಗಳನ್ನು ಅಳವಡಿಸಿದ್ದಾರೆ. ಈ ಕಿರು ಪುಸ್ತಕವು ಹಿಂದೂ ಧರ್ಮದ ಬಗ್ಗೆ ಗೌರವ, ಹಾಗೂ ದೇಶ ಪ್ರೇಮದ ಜಾಗೃತಿಯನ್ನು ಉಂಟುಮಾಡುತ್ತದೆ.

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು ಎಂದ ಕೂಡಲೇ ನಮಗೆ ಕಪ್ಪು ಶಿಲೆಯ ಕೃಷ್ಣನ ಮೂರುತಿ ನೆನಪಾಗಬಹುದು. ಆದರೆ ಶ್ರೀ ರಾಯರದು ಗೌರವವರ್ಣ ಹಾಗೂ ತೇಜಸ್ವಿ ಮುಖ. ಅವರ ಬಾಲ್ಯದ ವಿದ್ಯಾಭ್ಯಾಸ ನಂಜನಗೂಡಿನ ಮಠೀಯ ವಾತಾವರಣದಲ್ಲಿ ನಡೆಯಿತು. ಆ ವಾತಾವರಣವು ಸಂಕುಚಿತ ಮನೋಭಾವನೆಗೆ ಎಡೆಕೊಡದೆ ಶಾಸ್ತ್ರಾಧ್ಯಯನಕ್ಕೆ ಭದ್ರ ಬುನಾದಿಯನ್ನು ಒದಗಿಸಿತು. ಮನಃಶಾಸ್ತ್ರದಲ್ಲಿ ಪ್ರೌಢ ವ್ಯಾಸಂಗ ಮಹಾರಾಜಕಾಲೇಜಿನಲ್ಲಿ, ಇವರಿಗೆ ವಿದ್ಯಾರ್ಥಿ ಜೀವನದಲ್ಲಿ ಒಂದು ತರಹದ ಉಗ್ಗು ಇತ್ತಂತೆ. ಖ್ಯಾತ ರೋಮನ್ ವಾಗ್ಮಿ ಸಿಸೆರೊವಿನ ಹಾಗೆ ಸ್ವಪ್ರಯತ್ನದಿಂದ ಉಗ್ಗುವಿಕೆಯನ್ನು ನೀಗಿಕೊಂಡರು. ಅವರ ಉಪನ್ಯಾಸದ ಸೊಗಸನ್ನು ಅನುಭವಿಸಿದವರಿಗೆ ಹಿಂದೆ ಅವರಿಗೆ ಉಗ್ಗು ಇತ್ತೆಂದು ನಂಬುವುದು ಕಷ್ಟ. ಚಂದನದ ಕಿರು ತಿಲಕವನ್ನು ಬಿಟ್ಟರೆ ಬೇರಾವ ಲಾಂಛನವನ್ನೂ ರಾಯರು ಧರಿಸುವುದಿಲ್ಲ. ಹೀಗಾಗಿ ಅವರು ಯಾವ ಪಂಥದವರು ಎಂದು ತಿಳಿಯಲಾಗದು. ರಾಯರಿಗೆ ಹಲವಾರು ಪ್ರಶಸ್ತಿ, ಗೌರವಗಳು ಸಂದಿವೆ. ಆದರೆ ಇತ್ತೀಚಿನ ಸತ್ಯಕಾಮ ಪ್ರಶಸ್ತಿ ಅವರಿಗೆ ಬಹು ಅಮೂಲ್ಯ-ಏಕೆಂದರೆ ಸತ್ಯಕಾಮರ ಬಗೆಗೆ ಅವರಿಗೆ ಪೂಜ್ಯ ಭಾವನೆ. ಅವರು ಸತ್ಯಕಾಮರನ್ನು ಹತ್ತಿರದಿಂದ ಬಲ್ಲವರು ಮತ್ತು ಅವರ ಕೃತಿಗಳ ನಿಖರ ಅಧ್ಯಯನ-ಲೇಖನ-ಪ್ರವಚನ ಮಾಡಿದ್ದಾರೆ.

ಡಿಸೆಂಬರ್ ೪ ರಂದು ಸತ್ಯಕಾಮ ಪ್ರತಿಷ್ಠಾನವು ವಿ.ಸೀ.ಸಂಪದದ ಜತೆಗೂಡಿ ಪ್ರೊ.ಎಸ್.ಕೆ.ರಾಮಚಂದ್ರರಾಯರನ್ನು ವಿಚಾರ ಸಂಕಿರಣದ ಜತೆ ಬೆಂಗಳೂರಿನಲ್ಲಿ ಸನ್ಮಾನಿಸಿತು.

***

ಈಶಾವಾಸ್ಯ ಉಪನಿಷತ್

-ಕೆ.ರಾಘವೇಂದ್ರ ರಾವ್

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದಾಗ ಮಹಾತ್ಮ ಗಾಂಧಿಯವರು ಒಂದು ಮಾತನ್ನು ಪದೇಪದೇ ಹೇಳುತ್ತಿದ್ದರು. "ಭಗವದ್ಗೀತೆ ನನಗೆ ಒಬ್ಬ ತಾಯಿ ಇದ್ದಂತೆ. ಮಾನಸಿಕ ತುಮುಲ ಉಂಟಾದಾಗಲೆಲ್ಲ ನಾನು ಗೀತೆಯಲ್ಲಿ ಸಮಾಧಾನ ಮತ್ತು ಪರಿಹಾರ ಕಂಡುಕೊಳ್ಳುತ್ತೇನೆ" ಎಂದು. ಕೆಲವು ಕಾಲದ ನಂತರ ಅವರಿಗೆ ಮೊದಲನೆಯ ಉಪನಿಷತ್ ಈಶಾವಾಸ್ಯ ಪರಿಚಯವಾದಾಗ ವಿನ್‌ಸೆಂಟ್ ಶೀಹಾನ್ ಎಂಬೊಬ್ಬ ಅಮೆರಿಕನ್ ಪತ್ರಕರ್ತರಿಗೆ ಸಂದರ್ಶನ ನೀಡುತ್ತಾ ಹೇಳಿದರು"ಭಗವದ್ಗೀತೆ ೭೦೦ ಶ್ಲೋಕಗಳಲ್ಲಿ ಏನನ್ನು ಹೇಳಿದೀಯೋ ಅದರ ತಿರುಳನ್ನು ಈ ಚಿಕ್ಕ ಉಪನಿಷತ್ ೧೮ ಮಂತ್ರಗಳಲ್ಲಿ ಹೇಳಿದೆ. ನಮ್ಮ ಆಧ್ಯಾತ್ಮ ಗ್ರಂಥಗಳೆಲ್ಲಾ ಯಾವುದಾದರೂ ಬೆಂಕಿ ಆಕಸಿಕ್ಮದಲ್ಲಿ ಸುಟ್ಟುಹೋದರೂ ಕೂಡ ಈಶೋಪನಿಷತ್ತಿನ ಮೊದಲನೇ ಎರಡು ಮಂತ್ರಗಳು ಉಳಿದುಕೊಂಡರೆ ಇಡೀ ಹಿಂದೂ ಧರ್ಮವೇ ಉಳಿಯುತ್ತದೆ" ಎಂದು.

ಈ ಉಪನಿಷತ್ತು ಶುಕ್ಲ ಯಜುರ್ವೇದದ ಕೊನೆ ಅಧ್ಯಾಯ. ಇದು ವೇದದ ಮೂಲ ಸಂಹಿತಾ ಭಾಗದಲ್ಲಿರುವುದರಿಂದ ಇದನ್ನು "ಮಂತ್ರೋಪನಿಷತ್" ಎಂದೂ ಕರೆಯುತ್ತಾರೆ. "ಯಜ್ಞ" ನಾಮಕಪರಮಾತ್ಮನೇ ಈ ಮಂತ್ರದ ದೇವತೆ. ಈ ಉಪನಿಷತ್ತಿನ ದ್ರಷ್ಟಾರ ಯಾಜ್ಞ್ಯವಲ್ಕ್ಯ ಋಷಿ. "ಈಶಾವಾಸ್ಯಮ್" ಎಂಬ ಪದದಿಂದ ಪ್ರಾರಂಭವಾಗಿರುವುದರಿಂದ ಇದಕ್ಕೆ "ಈಶಾವಾಸ್ಯ ಉಪನಿಷತ್" ಎಂಬ ಹೆಸರು ಬಂದಿತು.

ಇದರ ಮೊದಲೆರಡು ಮಂತ್ರಗಳು ಹೀಗಿವೆ:

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್॥

ಈ ಜಗತ್ತೆಲ್ಲವೂ ಭಗವಂತನ ಮನೆ. ಅವನಿಂದ ಒಳಗೂ ಹೊರಗೂ ಪೂರ್ಣ ವ್ಯಾಪವಾಗಿದೆ ಅವನಿಂದ ನಿಯಂತ್ರಿತವಾಗಿದೆ. ಎಲ್ಲ ಸಂಪತ್ತಿಗೂ ನಿಜವಾದ ಒಡೆಯ ಅವನೇ. ಅವನಿಂದ ಕೊಡಲ್ಪಟ್ಟಿದ್ದನ್ನ ಭಗವಂತನ ಪ್ರಸಾದ ಎಂದು ಸ್ವೀಕಾರ ಮಾಡು. ಹೇಗೆ ಭಗವತ್‌ಪ್ರಸಾದವನ್ನು ನಾವು ಭಕ್ತಿಯಿಂದ ಸ್ವೀಕರಿಸಿ, ಪೋಲುಮಾಡದೆ ಎಲ್ಲರೊಡನೆ ಹಂಚಿಕೊಂಡು ಅನುಭವಿಸುತ್ತೇವೆಯೋ ಹಾಗೆ ನಡೆದುಕೋ. ನಿನ್ನದಲ್ಲದ್ದಕ್ಕೆ ದುರಾಶೆ ಪಡಬೇಡ. ನೀನು ಬದುಕಿನಲ್ಲಿ ಮಾಡುವ ಎಲ್ಲ ಕರ್ಮಗಳನ್ನು ಭಗವಂತನ ಪೂಜೆ ಎಂದು ಮಾಡು. ಲೊಕಸೇವೆಯನ್ನೇ ಭಗವಂತನ ಸೇವೆ ಎಂದು ತಿಳಿ. ಹಾಗೆ ತಿಳಿದು ಪೂರ್ಣ ಆಯಸ್ಸು ಅಂದರೆ ನೂರು ವರ್ಷಗಳ ಕಾಲ ಬದುಕಲು ಆಶಿಸು. ಈ ಅನುಸಂಧಾನ ಮನಸ್ಸಿನಲ್ಲಿದ್ದರೆ ನಿನಗೆ ಕರ್ಮಲೇಪ ಆಗುವುದಿಲ್ಲ.

ಈ ಮೊದಲೆರಡು ಮಂತ್ರಗಳ ಸಂದೇಶವನ್ನು ಎತ್ತಿ ಹಿಡಿದ ಗಾಂಧೀಜಿಯವರು ಮುಂದೆ ಹೇಳಿದರು. "ಯಾವ ಒಬ್ಬ ವ್ಯಕ್ತಿಯ ಹತ್ತಿರ ಎಷ್ಟು ಸಂಪತ್ತಿದೆ ಎನ್ನುವುದು ಮುಖ್ಯವಲ್ಲ. ಆ ವ್ಯಕ್ತಿ ಇಂದು ಇರಬಹುದು ನಾಳೆ ಕಣ್ಮರೆಯಾಗಬಹುದು ಹುಟ್ಟು-ಸಾವು ಯಾರ ಕೈಯಲ್ಲೂ ಇಲ್ಲ. ಆದ್ದರಿಂದ ಆ ವ್ಯಕ್ತಿ ಆ ಸಂಪತ್ತನ್ನು ಹೇಗೆ ವಿನಿಯೋಗ ಮಾಡುತ್ತಾನೋ ಅದು ಮುಖ್ಯ. "ಹಾಗಾದರೆ ಎಷ್ಟೋ ಜನಕ್ಕೆ ಭಗವಂತ ಅವರ ಅವಶ್ಯಕತೆಗಿಂತ ಹೆಚ್ಚಿಗೆ ಸಂಪತ್ತನ್ನು ನೀಡಿದ್ದಾನಲ್ಲಾ ಏಕೆ ಎನ್ನುವ ಪ್ರಶ್ನೆಗೆ ಅವರೆಂದರು ಅದು ನಿನ್ನದಲ್ಲ. ನೀನು ಅದರ ವಿಶ್ವಸ್ಥ ಮಾತ್ರ, ಅಂದರೆ ನೀನು ಒಬ್ಬ Trustee ಮಾತ್ರ". ಹೀಗೆ ಗಾಂಧೀಜಿಯವರು "Trusteeship Theory" ಯನ್ನು ಪ್ರತಿಪಾದಿಸಿದರು. ಅಷ್ಟೇ ಅಲ್ಲ ಪ್ರಪಂಚದಲ್ಲಿ ನಿಜವಾದ ಅಂದರೆ ಸಮಾಜವಾದವನ್ನು ಹೇಳುವುದು ಈಶೋಪನಿಷತ್ತೇ ಎಂದರು.

ಈ ಅನುಸಂಧಾನ ಇದ್ದಾಗಲೇ ಬದುಕು ಬಂಧನವಾಗದೆ ಅರ್ಥಪೂರ್ಣವಾಗುವುದು. ಬದುಕೇ ಒಂದು ಯಜ್ಞ ರೂಪವದು Life become God's gift to us.

ಹೀಗೆ ಈಶೋಪನಿಷತ್ತು ನಮ್ಮ ಬದುಕಿಗೆ ಒಂದು ನೀಲಿ ನಕ್ಷೆ.

* * *

ಬುದ್ಧನ ಅರ್ಥಶಾಸ್ತ್ರ

–ಜಿ.ಎನ್. ಮಲ್ಲಿಕಾರ್ಜುನ

ಸಜ್ಜೀವನ ಬುದ್ಧನ ಅಷ್ಟಾಂಗ ಮಾರ್ಗಗಳಲ್ಲಿ ಒಂದು. ಸಾತ್ವಿಕ ಜೀವನ ವಿಧಾನವನ್ನು ಬೌದ್ಧಧರ್ಮ ಪ್ರತಿಪಾದಿಸುತ್ತದೆ ಎಂದ ಮೇಲೆ ಬೌದ್ಧಧರ್ಮೀಯ ಅರ್ಥಶಾಸ್ತ್ರವೆನ್ನುವುದು ಇರಲೇಬೇಕು. ಬುದ್ಧ ಪರಂಪರೆಗೆ ಬದ್ಧವಾಗಿರುವುದಾಗಿ ಘೋಷಿಸಿಕೊಂಡಿರುವ ರಾಷ್ಟ್ರಗಳಲ್ಲಿ ಬರ್ಮಾದೇಶವೂ ಒಂದು. ಈ ದೇಶದ ನಂಬಿಕೆಯ ಪ್ರಕಾರ 'ಆರ್ಥಿಕ ಅಭಿವೃದ್ಧಿ ಮತ್ತು ಧಾರ್ಮಿಕ ಮೌಲ್ಯಗಳ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಆಧ್ಯಾತ್ಮಿಕ ಆರೋಗ್ಯ ಮತ್ತು ಭೌತಿಕ ಸೌಖ್ಯಗಳು ಪರಸ್ಪರ ವಿರೋಧಿಗಳಲ್ಲ; ಸಹಜ ಬಂಧುಗಳು.

ಒಂದು ವೇಳೆ ನಾವು ಇಚ್ಛಿಸಿದಲ್ಲಿ ಆಧುನಿಕ ತಂತ್ರಜ್ಞಾನದ ಪ್ರಯೋಜನಗಳನ್ನು ಮತ್ತು ಬೌದ್ಧಪರಂಪರೆಯ ಮೌಲ್ಯಗಳನ್ನು ಒಗ್ಗೂಡಿಸಿ ಬೆಸೆದ ನವಸಂಸ್ಕೃತಿಯನ್ನು ಆಚರಣೆಗೆ ತರಬಹುದು. ನಮ್ಮ ಕನಸು ಮತ್ತು ಕ್ರಿಯೆಗಳನ್ನು ಸ್ವಚ್ಛನಂಬಿಕೆಗಳತ್ತ ಕೊಂಡೊಯ್ಯಬಹುದು' ಬರ್ಮಾ ದೇಶವನ್ನು ಒಳಗೊಂಡಂತೆ ಇತರೇ ಮೂರನೇ ಜಗತ್ತಿನ ರಾಷ್ಟ್ರಗಳು ಇಂದು ಆಧುನಿಕ ಅರ್ಥಶಾಸ್ತ್ರ ತತ್ವಗಳ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದೆಂದು ಭಾವಿಸುತ್ತಿವೆ. ಅದಕ್ಕಾಗಿ ಆರ್ಥಿಕ ಯೋಜನೆಗಳ ನೀಲ ನಕ್ಷೆಯನ್ನು ತಯಾರಿಸಿಕೊಡುವಂತೆ ಅವು ಮುಂದುವರಿದ ರಾಷ್ಟ್ರಗಳಿಗೆ ದುಂಬಾಲು ಬೀಳುತ್ತಿವೆ.

ಆಧುನಿಕ ಅರ್ಥಶಾಸ್ತ್ರದಂತೆ ತಮ್ಮ ಧಾರ್ಮಿಕ ನೆಲೆಯಲ್ಲಿಯೇ ಬೌದ್ಧ ಧರ್ಮೀಯ ಅರ್ಥಶಾಸ್ತ್ರವೊಂದರ ಸಾಧ್ಯತೆಯ ಬಗ್ಗೆ ಅವು ಯೋಚಿಸುತ್ತಿಲ್ಲ. ಅಲ್ಲಿನ ಆರ್ಥಿಕ ತಜ್ಞರೂ ಸಹ ಇತರೆ ಸಾಮಾನ್ಯ ಪರಿಣಿತರುಗಳಂತೆ ಸಾಪೇಕ್ಷವಲ್ಲದ ಸ್ಪಷ್ಟ ಸತ್ಯವನ್ನು ನೀಡುವ ವಿಜ್ಞಾನವೊಂದಿದೆ ಎಂದು ನಂಬುತ್ತಾ, ಅಭೌತ ವಿದ್ಯಾಮಾನಗಳ ಬಗ್ಗೆ ಕುರುಡರಾಗಿದ್ದಾರೆ. ಕೆಲವರಂತೂ ಅರ್ಥವಿಜ್ಞಾನದ ತತ್ವಗಳು ಗುರುತ್ವಾಕರ್ಷಣ ನಿಯಮದಷ್ಟೇ ನಿಖರ ಮತ್ತು ಅಭೌತ ಚಟುವಟಿಕೆಗಳಿಂದ ಮುಕ್ತ ಎಂದು ವಾದಿಸುತ್ತಾರೆ. ಈ ರೀತಿಯ ವಾದ ವಿಧಾನಗಳಲ್ಲಿ ತೊಡಗುವ ಬದಲು ಜೀವನದ ಕೆಲವೊಂದು ಮೂಲಭೂತ ಸಮಸ್ಯೆಗಳ ಬಗ್ಗೆ ಆಧುನಿಕ ಅರ್ಥಶಾಸ್ತ್ರಜ್ಞ ಮತ್ತು ಬೌದ್ಧ ಧರ್ಮೀಯ ತಾಳುವ ನಿಲುವುಗಳನ್ನು ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳುವುದರಿಂದ ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಬಗ್ಗೆ ಸ್ಪಷ್ಟ ಪರಿಕಲ್ಪನೆಯನ್ನು ಹೊಂದಬಹುದು.

ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತೆ ಶ್ರಮವೇ ಸಂಪತ್ತಿನ ಮೂಲ. ಆಧುನಿಕ ಅರ್ಥಶಾಸ್ತ್ರಜ್ಞನ ಪ್ರಕಾರ ಶ್ರಮ ಅಥವಾ ಶ್ರಮವನ್ನು ಬೇಡುವ ಕೆಲಸ ಅನಿವಾರ್ಯ ಪೀಡೆ. ಉದ್ಯೋಗ ನೀಡುವ ಮಾಲೀಕನ ದೃಷ್ಟಿಯಲ್ಲಿ ಅದು ಖರ್ಚಿನ ಮೂಲ. ಯಾಂತ್ರೀಕರಣದ ಮೂಲಕ ಈ ಬಾಬಿನ ಖರ್ಚನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳುವುದು ಅಸಾಧ್ಯವಾದರೂ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಅದನ್ನು ಕಡಿಮೆಗೊಳಿಸಿಕೊಳ್ಳಬಹುದು. ಇದೇ ಕೆಲಸವನ್ನು ಕಾರ್ಮಿಕ ನೋಡುವ ದೃಷ್ಟಿ ಬೇರೆ. ಅವನ ಪ್ರಕಾರ ಕೆಲಸದಲ್ಲಿ ಬಳಕೆಯಾಗುವ ಶ್ರಮ ತುಷ್ಟಿಗುಣವಿಲ್ಲದ್ದು.

ಕೆಲಸನಿರ್ವಹಿಸುವುದೆಂದರೆ ವಿರಾಮ ಸುಖವನ್ನು ತ್ಯಾಗ ಮಾಡುವುದು. ಪಡೆಯುವ ಕೂಲಿ ವಿರಾಮದ ನಿರಾಕರಣೆಗೆ ನೀಡುವ ಪರಿಹಾರ . ಹಾಗಾಗಿ ಮಾಲೀಕನ ದೃಷ್ಟಿಯಲ್ಲಿ ಕಾರ್ಮಿಕನಿಲ್ಲದೆಯೇ ವಸ್ತುಗಳನ್ನು ಉತ್ಪಾದಿಸುವುದು ಲಾಭದಾಯಕ ಮಾರ್ಗವಾದರೆ, ಕೆಲಸ ನಿರ್ವಹಿಸದೆಯೇ ಆದಾಯ ಪಡೆಯುವುದು ಕಾರ್ಮಿಕನ ದೃಷ್ಟಿಯಲ್ಲಿ ಖುಷಿಯ ವಿಷಯ.

ಈ ಮನೋವೃತ್ತಿಯಿಂದಾಗಿ ಕೆಲಸ ನಿರ್ವಹಿಸುವುದರಿಂದ ದೂರ ಉಳಿಯುವ ಪ್ರಯತ್ನವೇ ಕೆಲಸ ಎನಿಸಿಕೊಂಡರೆ ಅದರ ಹೊರೆಯನ್ನು ಹಗುರ ಮಾಡಿಕೊಳ್ಳುವ ಪ್ರತಿ ಪ್ರಯತ್ನವೂ ದಕ್ಷತೆಯ ಕ್ರಮವೆಂದು ಪರಿಗಣಿಸಲ್ಪಡುತ್ತದೆ. ಯಾಂತ್ರೀಕರಣ ಕೂಡ ಇಂಥ ದಕ್ಷತೆಯ ಒಂದು ಕ್ರಮವಾದರೆ ಆಡಂಸ್ಮಿತ್ ತನ್ನ 'ರಾಷ್ಟ್ರಗಳ ಸಂಪತ್ತು' ಪುಸ್ತಕದಲ್ಲಿ ಹೇಳುವ ಶ್ರಮವಿಭಜನೆ ಮತ್ತೊಂದು ವಿಧಾನ. ಉತ್ಪಾದನಾ ಚಟುವಟಿಕೆಯನ್ನು ಸಣ್ಣ ಸಣ್ಣ ಚಟುವಟಿಕೆಗಳನ್ನಾಗಿ ವಿಭಜಿಸುವ ಕ್ರಿಯೆ ಒಂದು ಸಾಧಾರಣ ಪರಿಣತೀಕರಣದಷ್ಟೇ ಅಲ್ಲದೆ ಉತ್ಪಾದನೆಯ ವೇಗವನ್ನೂ ಹೆಚ್ಚಿಸುತ್ತದೆ. ಆದರೆ ಇಡೀ ಚಟುವಟಿಕೆಗಳನ್ನು ಅತಿಸಣ್ಣ ಕ್ರಿಯೆಗಳನ್ನಾಗಿ ವಿಂಗಡಿಸಿ, ಪರಿಣಿತರುಗಳಿಗೆ ಅವುಗಳನ್ನು ನಿರ್ವಹಿಸಲು ಒಪ್ಪಿಸುವದರಿಂದ ಆ ವ್ಯಕ್ತಿಗಳಿಗೆ ಇಡೀ ಉತ್ಪಾದನಾ ಚಟುವಟಿಕೆಯಲ್ಲಿನ ಅವರ ಪಾತ್ರ, ಪ್ರಾಮುಖ್ಯತೆಗಳು ಅರಿವಾಗುವುದಿಲ್ಲ. ಯಂತ್ರಗಳಂತೆ ಕೆಲಸ ನಿರ್ವಹಿಸುತ್ತಾರಷ್ಟೆ.

ಆದರೆ ಬೌದ್ಧ ಧರ್ಮೀಯ ದೃಷ್ಟಿಕೋನ ಕೆಲಸ ನಿರ್ವಹಣೆಯನ್ನು ಮೂರು ಆಯಾಮಗಳಲ್ಲಿ ಗುರುತಿಸುತ್ತದೆ.

೧. ವ್ಯಕ್ತಿಗೆ ಅವನ ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಬಳಸುವ ಮತ್ತು ಬೆಳಸಿಕೊಳ್ಳುವ ಅವಕಾಶವಾಗಿ;

೨. ಇತರರೊಂದಿಗೆ ಗುರುತಿಸಿಕೊಳ್ಳುತ್ತಾ ಅವನ ಅಹಂ ಅನ್ನು ನಿವಾರಿಸಿಕೊಳ್ಳುವ ಸಾಧ್ಯತೆಯಾಗಿ;

೩. ಸಾತ್ವಿಕ ಬದುಕಿಗೆ ಅವಶ್ಯವಾದ ಭೌತ ಸರಕುಗಳ ಉತ್ಪಾದನೆಯಾಗಿ. ಯಾವುದೇ ಕೆಲಸವನ್ನು ಅರ್ಥರಹಿತವಾಗಿ, ಅನುಪಯೋಗಿಯಾಗಿ ಕಾರ್ಮಿಕರಿಗೆ ಆಯಾಸ ತರಿಸುವಂತೆ ಅವರ ನರನಾಡಿಗಳನ್ನು ಹಿಂಡುವಂತೆ ಸಂಘಟಿಸುವುದು ಯಾವುದೇ ಅಪರಾಧಕ್ಕಿಂತ ಕಡಿಮೆಯಲ್ಲ. ಮನುಷ್ಯರಿಗಿಂತ ಅವರು ಉತ್ಪಾದಿಸುವ ಸರಕುಗಳಿಗೆ ಹೆಚ್ಚು ಒತ್ತುಕೊಡುವುದು ಬಾಲಿಶ ಕೃತ್ಯ. ಅಂತೆಯೇ ಕೆಲಸದ ಬದಲಿಗೆ ವಿರಾಮವನ್ನು ಬಯಸುವುದು ನಮ್ಮ ಅಸ್ತಿತ್ವದ ಮೂಲ ಉದ್ದೇಶವನ್ನೇ ಮರೆತಂತೆ. ವಿರಾಮ ಮತ್ತು ಕೆಲಸಗಳು ಒಂದನ್ನೊಂದು ಅವಲಂಬಿಸಿರುವ ಮುಖ್ಯ ಕ್ರಿಯೆಗಳು. ಅವುಗಳನ್ನು ಪ್ರತ್ಯೇಕಿಸಿ ನೋಡುವುದೆಂದರೆ ಕೆಲಸ ನಿರ್ವಹಿಸುವುದರ ತೃಪ್ತಿ ಮತ್ತು ವಿರಾಮದ ಖುಷಿಯನ್ನು ಕಳೆದುಕೊಂಡಂತೆ.

ಬೌದ್ಧ ಧರ್ಮೀಯ ದೃಷ್ಟಿಕೋನ ಯಾಂತ್ರಿಕರಣವನ್ನು ಎರಡು ರೀತಿಯಲ್ಲಿ ನೋಡುತ್ತದೆ. ಒಂದು ಮನುಷ್ಯನ ಶಕ್ತಿ ಕೌಶಲ್ಯಗಳನ್ನು ಬೆಳೆಸುವಂತಹುದಾದರೆ, ಮತ್ತೊಂದು ಅವನನ್ನು ಯಂತ್ರಗಳ ಗುಲಾಮನನ್ನಾಗಿಸುವಂತಹುದು. ಮಾನವ ಶಕ್ತಿಯನ್ನು ನಿಷ್ಪ್ರಯೋಜನಗೊಳಿಸುವ ಯಾವುದೇ ಯಾಂತ್ರೀಕರಣ ಒಂದು ಸಂಸ್ಕೃತಿಯನ್ನೇ ನಾಶ ಮಾಡುತ್ತದೆ ಎನ್ನುವುದು ಪಾಶ್ಚಿಮಾತ್ಯರ ಆಧುನಿಕತೆಯನ್ನು ಪೌರ್ವಾತ್ಯರ ಪ್ರಾಚೀನತೆಯನ್ನು

ಅರ್ಥವತ್ತಾಗಿ ವಿವರಿಸಬಲ್ಲ ಆನಂದಕುಮಾರಸ್ವಾಮಿಯವರ ಅಭಿಪ್ರಾಯ. ಭೌತ ಸರಕುಗಳ ಉತ್ಪಾದನೆಯೇ ಆಧುನಿಕ ಅರ್ಥಜ್ಞರ ಉದ್ದೇಶವಾದರೆ ಮನುಷ್ಯನ ಬಹುಬಯಕೆಗಳಿಗೆ ಕಡಿವಾಣ ಹಾಕಿ ಅವನ ನಡತೆಯನ್ನು ರೂಪಿಸುವುದು ಬೌದ್ಧ ಧರ್ಮೀಯ ಅರ್ಥವ್ಯವಸ್ಥೆಯ ಉದ್ದೇಶವಾಗಿದೆ. ಉತ್ತಮ ನಡತೆ ಕೆಲಸದ ಉತ್ತಮ ನಿರ್ವಹಣೆಗೆ ಕಾರಣವಾದರೆ ಒಳ್ಳೆಯ ಕೆಲಸ ಒಳ್ಳೆಯ ನಡತೆಯನ್ನು ಶ್ರಮಿಕರಲ್ಲಿ ಮೂಡಿಸುತ್ತದೆ. ಪರಸ್ಪರ ಸ್ವಾತಂತ್ರ್ಯ, ಗೌರವಗಳಿರುವ ಕೆಲಸದ ವಾತಾವರಣದಲ್ಲಿ ಉತ್ಪಾದನೆಯಾದ ಸರಕು-ಸೇವೆಗಳಿಗೂ ಮಾರುಕಟ್ಟೆಯಲ್ಲಿ ಅಷ್ಟೇ ಗೌರವವಿರುತ್ತದೆ. ನಿರ್ವಹಿಸಬೇಕಾದ ಯಾವುದೇ ಕೆಲಸದ ಸ್ವರೂಪವನ್ನು ಸರಿಗೊಳಿಸುವ ಪ್ರಯತ್ನ ಅದನ್ನು ನಿರ್ವಹಿಸುವ ವ್ಯಕ್ತಿಯ ಅಂತರಂಗದ ಆಳದಲ್ಲಿ ಹುದುಗಿರಬಹುದಾದ ಮಹತ್ತನ್ನು,ಸೃಜನಶೀಲತೆಯನ್ನು ಬಯಲು ಮಾಡುತ್ತದೆ ಅವನ ಮೃಗೀಯ ವರ್ತನೆಯನ್ನು ಶಿಸ್ತುಬದ್ಧಗೊಳಿಸಿ, ಸಂಸ್ಕರಿಸಿ ವ್ಯಕ್ತಿತ್ವ ವಿಕಾಸಕ್ಕೆ ಭೂಮಿಕೆ ಒದಗಿಸುತ್ತದೆ.

ಶಕ್ತ ವ್ಯಕ್ತಿಗೆ ಕೆಲಸ ನಿರ್ವಹಿಸುವ ಅವಕಾಶವೇ ನಿರಾಕರಣೆಯಾದಾಗ ಅವನು ಜಿಗುಪ್ಸೆಗೊಳ್ಳುತ್ತಾನೆ. ನಿರಾಶೆ ನಿರುತ್ಸಾಹಗಳಿಗೊಳಗಾಗುತ್ತಾನೆ. ಕಡಿಮೆ ಅವಧಿಯಲ್ಲಿ ಹೆಚ್ಚು ಸರಕುಗಳನ್ನು ಉತ್ಪಾದಿಸಬೇಕೆನ್ನುವ ಉದ್ದೇಶದ ಆಧುನಿಕ ಅರ್ಥಶಾಸ್ತ್ರಜ್ಞ ಶ್ರಮದ ಚಲನೆಗಾಗಿ, ವೇತನಗಳ ಸ್ಥಿರತೆಗಾಗಿ ಅರ್ಥವ್ಯವಸ್ಥೆಯನ್ನು ಪೂರ್ಣ ಉದ್ಯೋಗದ ಸ್ಥಿತಿಯಲ್ಲಿ ಕೊಂಡೊಯ್ಯಬೇಕೇ ಅಥವಾ ಅದಕ್ಕಿಂತ ಕೆಳಸ್ಥಿತಿಯಲ್ಲಿ ಕೊಂಡೊಯ್ಯಬೇಕೇ ಎನ್ನುವ ಲೆಕ್ಕಾಚಾರದಲ್ಲೇ ಸದಾತೊಡಗಿಸಿಕೊಂಡಿರುತ್ತಾನೆ. ಹೆಚ್ಚು ಸರಕುಗಳನ್ನು ಉತ್ಪಾದಿಸುವುದರಲ್ಲೇ ಅವನ ಯಶಸ್ಸನ್ನು ಕಾಣುತ್ತಾನೆ.

'ದಿ ಅಫ್ಲೂಯೆಂಟ್ ಸೊಸೈಟಿ' ಪುಸ್ತಕದ ಕರ್ತೃ ಪ್ರೊ॥ ಗಾಲ್‌ಬ್ರೆತ್ ವಿವರಿಸುವಂತೆ 'ಸರಕುಗಳ ಸೀಮಾಂತ ತುರ್ತು ಅವಶ್ಯಕತೆ ಎಷ್ಟಿರುತ್ತದೋ ಅಷ್ಟೇ ತುರ್ತುಸ್ಥಿತಿ ಶ್ರಮಿಕ ಸಮೂಹದ ಕೊನೆ ವ್ಯಕ್ತಿಗೆ ಉದ್ಯೋಗ ನೀಡಲು ಸೃಷ್ಟಿಯಾಗುತ್ತದೆ'. ಆರ್ಥಿಕ ಸ್ಥಿರತೆಯ ದೃಷ್ಟಿಯಿಂದ ಒಂದು ವೇಳೆ ಸ್ವಲ್ಪ ಪ್ರಮಾಣದ ನಿರುದ್ಯೋಗವನ್ನು ಇಷ್ಟಪಡುವುದಾದರೆ ಅಷ್ಟು ಜನ ನಿರುದ್ಯೋಗಿಗಳಿಗೆ ಜೀವನಾವಶ್ಯಕ ವಸ್ತುಗಳನ್ನು ನೀಡಿ ಅವರ ಜೀವನ ಮಟ್ಟ ಕಾಯಲು ಸನ್ನದ್ಧವಾಗಿರಬೇಕು. ಸರಕುಗಳನ್ನು ಜನರೊಂದಿಗೆ ಸಮೀಕರಿಸುವುದಾಗಲೀ ಅಥವಾ ಅನುಭೋಗವನ್ನು ಸೃಜನಶೀಲ ಕ್ರಿಯೆ ಎಂದು ಪರಿಗಣಿಸುವುದಾಗಲೀ ದುಷ್ಟಶಕ್ತಿಗಳಿಗೆ ಶರಣಾದಂತೆ.

ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಗುರಿ ಅರಸಿಬಂದ ಎಲ್ಲರಿಗೂ ಉದ್ಯೋಗ ನೀಡುವುದಾಗಿದೆ. ಪೂರ್ಣ ಉದ್ಯೋಗಾವಕಾಶಗಳ ಸ್ಥಿತಿಯನ್ನು ಅದು ಒಪ್ಪುತ್ತದೆಯೇ ಹೊರತು ಗರಿಷ್ಠ ಉದ್ಯೋಗಗಳ ಸೃಷ್ಟಿಯನ್ನಾಗಲೀ, ಗರಿಷ್ಠ ಪ್ರಮಾಣದಲ್ಲಿ ಸರಕುಗಳ ಉತ್ಪಾದನೆಯನ್ನಾಗಲೀ ಅಲ್ಲ.(It would be a full employment. Not the maximisation of employment. not the maximisation of production.) ಎಳೆಯ ಮಕ್ಕಳಿಗೆ ತಾಯ್ತನ ನೀಡಲು ಸಾಧ್ಯವಾಗದಂತೆ ಕಛೇರಿ, ಕಾರ್ಖಾನೆಗಳಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳುವುದು ಹಿಂಸಾತ್ಮಕವಾದುದರ ಜೊತೆಗೆ ಆರ್ಥಿಕತೆಯಿಂದಲೂ ಅಪ್ರಯೋಜಕ. ಉತ್ತಮ ಕೌಶಲ್ಯಗಳುಳ್ಳ ಕಾರ್ಮಿಕನನ್ನು ಸೈನಿಕ ಕೆಲಸಕ್ಕೆ ನೇಮಿಸುವುದು ನಷ್ಟಕಾರಿ ಕ್ರಮ ಎಂದು ಹೇಗೆ ಆಧುನಿಕ ಅರ್ಥಶಾಸ್ತ್ರಜ್ಞ ನಂಬುತ್ತಾನೋ, ಹಾಗೇಯೇ

ಮಕ್ಕಳನ್ನು ತಾಯಿಯ ಪೋಷಣೆಯಿಂದ ವಂಚಿಸುವಂತೆ ಅವರನ್ನು ಕೆಲಸಗಳಿಗೆ ನೇಮಿಸುವುದು ಎಂದು ಬೌದ್ಧ ಧರ್ಮಿಯ ಭಾವಿಸುತ್ತಾನೆ.

ಬೌದ್ಧ ಧರ್ಮದ ತಳಹದಿಯ ಅರ್ಥವ್ಯವಸ್ಥೆ ಸರಕುಗಳ ಉತ್ಪಾದನೆಗಿಂತ ಸಂಕೋಲೆಗಳ ವಿಮೋಚನೆಯಲ್ಲಿ ಆಸಕ್ತಿ ಹೊಂದಿರುತ್ತದೆ. ಅಂದ ಮಾತ್ರಕ್ಕೆ ಕೈ ಸರಕುಗಳ ಉತ್ಪಾದನೆಯನ್ನೇ ಅದು ನಿರಾಕರಿಸುವುದಿಲ್ಲ. ಬದಲಾಗಿ ಸರಕು ಮತ್ತು ಸಂಕೋಲೆಗಳ ನಡುವೆ ಮಧ್ಯಮ ಮಾರ್ಗ ಅನುಸರಿಸುತ್ತದೆ. ವಿಮೋಚನೆಯ ಹಾದಿಯಲ್ಲಿ ಅಡ್ಡಿಯಾಗುವುದು ಭೌತ ಸಂಪತ್ತಲ್ಲ; ಅದಕ್ಕೆ ಅಂಟಿಕೊಳ್ಳುವ ಮನಸ್ಸು ಭೋಗವಸ್ತುಗಳನ್ನು ಆನಂದಿಸುವುದಲ್ಲ; ಅವುಗಳಿಗಾಗಿ ಹಪಹಪಿಸುವುದು. ಸರಳತೆ ಮತ್ತು ಅಹಿಂಸೆಗಳೇ ಈ ವ್ಯವಸ್ಥೆಯ ತಿರುಳು. ವರ್ಷವೊಂದರಲ್ಲಿ ಒಬ್ಬ ವ್ಯಕ್ತಿ ಅನುಭೋಗಿಸುವ ಸರಕುಗಳನ್ನು ಆಧರಿಸಿಯೇ ಅವನ ಜೀವನಮಟ್ಟವನ್ನು ಅಳೆಯುವ ವಿಧಾನಕ್ಕೆ ಒಗ್ಗಿ ಹೋಗಿರುವ ಆಧುನಿಕ ಅರ್ಥಶಾಸ್ತ್ರಜ್ಞನಿಗೆ ಸಣ್ಣ ಸಂಪನ್ಮೂಲಗಳ ಸರಳ ಬಳಕೆಯಿಂದ ಸಿಗಬಹುದಾದ ಸಂತೃಪ್ತಿಯ ಬಗ್ಗೆ ಅರ್ಥ ಮಾಡಿಸುವುದು ಕಷ್ಟ. ದೃಷ್ಟಿಯಲ್ಲಿ ಹೆಚ್ಚು ಅನುಭೋಗಿಸುವವನೇ ಹೆಚ್ಚು ಸುಖಿ. ಬೌದ್ಧ ಧರ್ಮದ ಅನುಭೋಗದಿಂದ ಹೆಚ್ಚು ತುಷ್ಟಿಯನ್ನು ಹೊಂದುವುದನ್ನು ಪುರಸ್ಕರಿಸುತ್ತದೆ. ಮೈ ಮುಚ್ಚುವುದು ಮತ್ತು ಆಕರ್ಷಕವಾಗಿ ಕಾಣುವುದು ಬಟ್ಟೆ ತೊಡುವ ಉದ್ದೇಶವಾದರೆ ಆದಷ್ಟು ಕಡಿಮೆ ಸಂಪನ್ಮೂಲಗಳನ್ನು ವ್ಯಯಿಸಿ, ಕಡಿಮೆ ಬಟ್ಟೆಯನ್ನು ಬಳಸುವುದರಿಂದಲೂ ಅದನ್ನು ಈಡೇರಿಸಿಕೊಳ್ಳಬಹುದು. ಬಟ್ಟೆಗೆ ಅನ್ವಯಿಸಿದ್ದು ಇತರೆ ಎಲ್ಲಾ ಬಯಕೆಗಳಿಗೂ ಅನ್ವಯವಾಗುತ್ತದೆ. ಕಡಿಮೆ ಸಂಪನ್ಮೂಲಗಳನ್ನು ಬಳಸಿ ಹೆಚ್ಚು ಸುಖವನ್ನು ಸಾಧಿಸುವ ವಿಧಾನಗಳ ಬಗ್ಗೆ ಬೌದ್ಧ ಧರ್ಮೀಯ ಅರ್ಥಶಾಸ್ತ್ರ ವ್ಯವಸ್ಥಿತ ಅಧ್ಯಯನ ನಡೆಸುತ್ತದೆ.

ಸರಕುಗಳ ಗರಿಷ್ಠ ಅನುಭೋಗವನ್ನೇ ಸಂತೃಪ್ತಿ ಎಂದು ಭಾವಿಸುವುದರಿಂದ ಅವುಗಳ ಅಧಿಕ ಉತ್ಪಾದನೆಗಾಗಿ ಭೂಮಿ, ಶ್ರಮ,ಬಂಡವಾಳಗಳ ಮೇಲೆ ಅಧಿಕ ಒತ್ತಡ ಉಂಟಾಗುತ್ತದೆ. ಇದರಿಂದಾಗಿ ಉತ್ಪಾದನಾ ವಿಧಾನವೂ ಸಂಕೀರ್ಣವಾಗುತ್ತದೆ. ಉತ್ಪಾದನೆಯ ಮೇಲಿನ ಒತ್ತಡ ಮತ್ತು ಅದರ ಸಂಕೀರ್ಣತೆ ನಾಗರೀಕ ಬದುಕನ್ನು ಅಸಹನೀಯವಾಗಿಸುತ್ತದೆ. ಆದ್ದರಿಂದಲೇ ಬರ್ಮಾ ದೇಶದಂತಹ ರಾಷ್ಟ್ರಗಳಿಗಿಂತ ಅಮೆರಿಕಾದಂತಹ ರಾಷ್ಟ್ರಗಳಲ್ಲಿ ಹೆಚ್ಚು ಯಂತ್ರೋಪಕರಣಗಳನ್ನು ಬಳಸಿದಾಗ್ಯೂ ಕೂಡ ನಾಗರಿಕ ಬದುಕು ಸೂಕ್ಷ್ಮ ಮತ್ತು ಅಸಹನೀಯವಾಗುತ್ತಿದೆ. ಹಿಂಸಾತ್ಮಕವಾಗುತ್ತಿದೆ.

ಸರಳತೆ ಮತ್ತು ಅಹಿಂಸೆಗಳು ನಿಕಟ ಸಂಬಂಧ ಹೊಂದಿರುವುದರಿಂದ ಸಂಪನ್ಮೂಲಗಳ ಮಿತವಾದ ಬಳಕೆಯಿಂದ ಹೆಚ್ಚು ನೆಮ್ಮದಿ ಲಭ್ಯವಾಗುತ್ತದೆ. ಆದಷ್ಟೂ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ, ಸ್ಥಳೀಯರ ಅವಶ್ಯಕತೆಗಳ ಈಡೇರಿಕೆಗಾಗಿ ಉತ್ಪಾದಿಸುವುದರಿಂದ ದೂರದ ದೇಶಗಳ ಮೇಲೆ ಸಂಪನ್ಮೂಲಗಳಿಗಾಗಿ ಅವಲಂಬಿಸುವುದು ತಪ್ಪುತ್ತದೆ. ಸ್ಥಳೀಯ ಸಂಪನ್ಮೂಲಗಳನ್ನು ಮಾರುಕಟ್ಟೆಯನ್ನು ಆಧರಿಸಿ ಬದುಕುವ ಸಮುದಾಯದ ಜನರಿಗಿಂತ ಜಾಗತಿಕ ವ್ಯಾಪಾರ ವ್ಯವಸ್ಥೆಯನ್ನು ಅವಲಂಬಿಸಿ ಬದುಕುವ ಜನ ಹೆಚ್ಚು ಹಿಂಸಾವಾದಿಗಳಾಗಿರುತ್ತಾರೆ. ಕೆಲವೇ ಸಂದರ್ಭದಲ್ಲಿ ಅದೂ ಸಣ್ಣ ಪ್ರಮಾಣದಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ಬಿಟ್ಟರೆ ಉಳಿದಂತೆ ದೂರದ ದೇಶಗಳ ಮೇಲಿನ ಅವಲಂಬನೆ ಆರ್ಥಿಕವಾಗಿ ಲಾಭದಾಯಕವಲ್ಲ. ಕೆಲಸ ನಿರ್ವಹಿಸುವ ಸ್ಥಳ

ಮತ್ತು ವಾಸಿಸುವ ಮನೆಗಳ ಮಧ್ಯದ ದೂರವನ್ನು ಕ್ರಮಿಸಲು ಬಳಸುವ ಸಾರಿಗೆ ವ್ಯವಸ್ಥೆ ಜೀವನ ಮಟ್ಟದಲ್ಲಿನ ಹೆಚ್ಚಳವಲ್ಲ. ಹಾಗೆಯೇ ದೂರದ ದೇಶಗಳಿಂದ ಸಂಪನ್ಮೂಲಗಳನ್ನು ಪಡೆಯಲು ಏರ್ಪಡಿಸಿಕೊಂಡ ಸಾರಿಗೆ ಸಂಪರ್ಕ ವ್ಯವಸ್ಥೆಯ ಹೆಚ್ಚಳ ಕೂಡ. ಈ ಹೆಚ್ಚಳದ ಬಗೆಗಿನ ಅಂಕಿಸಂಖ್ಯೆಗಳನ್ನೇ ಆಧುನಿಕ ಅರ್ಥಶಾಸ್ತ್ರಜ್ಞ ಅಭಿವೃದ್ಧಿ ಎಂದು ಪರಿಗಣಿಸಿದರೆ ಬೌದ್ಧ ಧರ್ಮೀಯ ಅರ್ಥಜ್ಞ ಅದನ್ನು ಅನುಭೋಗದಲ್ಲಿನ ಅನಪೇಕ್ಷಿತ ನಷ್ಟ ಮತ್ತು ಸಂಪನ್ಮೂಲಗಳ ದುಂದುಗಾರಿಕೆ ಎಂದು ಭಾವಿಸುತ್ತಾನೆ.

ಪಾಶ್ಚಿಮಾತ್ಯ ವ್ಯಕ್ತಿಯನ್ನು ಅಂದರೆ ಆಧುನಿಕ ಅರ್ಥಜ್ಞನನ್ನು ಕುರಿತು ಫ್ರೆಂಚ್ ರಾಜಕೀಯ ಚಿಂತಕ ಬರ್ಟ್ರೆಂಟ್ ಡಿ ಜೋವಿನೆಲ್ ಹೇಳುವಂತೆ; 'ಮಾನವಶ್ರಮವೊಂದನ್ನುಳಿದು ಇನ್ನಾವುದನ್ನೂ ಆತ ಖರ್ಚು ಎಂದು ಪರಿಗಣಿಸುವುದಿಲ್ಲ.ಎಷ್ಟು ಖನಿಜಗಳು ಪೋಲಾಗುತ್ತವೆ ಅಥವಾ ಜೀವಗಳು ನಾಶವಾಗುತ್ತವೆ ಎನ್ನುವುದರ ಬಗ್ಗೆ ಆತ ತಲೆ ಕೆಡಿಸಿಕೊಳ್ಳುವುದಿಲ್ಲ. ಮನುಷ್ಯನ ಬದುಕು ಇನ್ನುಳಿದ ಜೀವಜಗತ್ತಿನ ಜಾಲದ ಮೇಲೆ ಅವಲಂಬಿಸಿದೆ ಎನ್ನುವುದು ತಿಳಿಯುವುದಿಲ್ಲ. ಮನುಷ್ಯರನ್ನುಳಿದು ಇತರೆ ಜೀವ ಪ್ರಪಂಚದ ದೂರವಾದ ಪಟ್ಟಣಗಳಿಂದ ಹೊರಡುವ ಜಗತ್ತಿನ ಆಳ್ವಿಕೆಯ ನಿರ್ಧಾರಗಳು ನಮ್ಮ ನಿತ್ಯ ಬಳಕೆಯ ಗಾಳಿ, ನೀರು, ಮರ ಮುಂತಾದ ಸಂಪನ್ಮೂಲಗಳ ಸಂರಕ್ಷಣೆಯ ಬಗ್ಗೆ ಗಮನಹರಿಸುವುದಿಲ್ಲ.' ಬುದ್ಧನ ಬೋಧನೆಗಳಲ್ಲಿ ಜೀವಗಳ ಅಸ್ತಿತ್ವಕ್ಕೆ, ಮರಗಳಿಗೆ ವಿಶೇಷ ಸ್ಥಾನವಿದೆ. ಪ್ರತಿಯೊಬ್ಬ ಅನುಯಾಯಿ ತನ್ನ ಜೀವಿತ ಅವಧಿಯಲ್ಲಿ ಆಗಾಗ್ಗೆ ಗಿಡ ನೆಟ್ಟು ಅದು ಮರವಾಗಿ ಬೆಳೆಯುವವರೆಗೆ ಆರೈಕೆ ಮಾಡುವುದು ಕಡ್ಡಾಯವಾಗಿದೆ. ಈ ನಿಯಮವನ್ನುಅನುಸರಿಸಿದಲ್ಲಿ ಯಾವ ವಿದೇಶಿ ಬಂಡವಾಳವೂ ಇಲ್ಲದೆ ಅಧಿಕ ಆರ್ಥಿಕ ಅಭಿವೃದ್ಧಿಯನ್ನು ಕಾಣಬಹುದು. ಆಗ್ನೇಯ ಏಷ್ಯಾ ರಾಷ್ಟ್ರಗಳ ಬಹಳಷ್ಟು ಸಮಸ್ಯೆಗಳು ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯಿಂದಲೇ ಆರಂಭವಾಗುತ್ತವೆ.

ಆಧುನಿಕ ಅರ್ಥಶಾಸ್ತ್ರ ಪುನರ್ ಸೃಷ್ಟಿಯಾಗುವ ಮತ್ತು ಆಗದ ಸಂಪನ್ಮೂಲಗಳ ನಡುವೆ ಅದಷ್ಟು ವ್ಯತ್ಯಾಸಗಳನ್ನು ಕಾಣುವುದಿಲ್ಲ. ಕಲ್ಲಿದ್ದಲು, ತೈಲ, ಮರ, ಜಲಶಕ್ತಿ ಮುಂತಾದವುಗಳ ನಡುವೆ ಅದು ಕಾಣುವ ಒಂದೇ ಒಂದು ವ್ಯತ್ಯಾಸ ಎಂದರೆ ಯಾವುದು ಸಸ್ತ ಎನ್ನುವುದು. ಪುನರ್ ಸೃಷ್ಟಿಯಾಗದ ಸಂಪನ್ಮೂಲಗಳ ದುಂದುಗಾರಿಕೆ ಹಿಂಸಾತ್ಮಕವಾದುದು. ಯೂರೋಪಿನ ಕಲಾಕೃತಿಯನ್ನು ಅಮೆರಿಕಾಕ್ಕೆ ಆಕರ್ಷಕ ಬೆಲೆಗೆ ಮಾರಿದರೆ ಅದನ್ನೊಂದು ಆರ್ಥಿಕ ಸಾಧನೆ ಎಂದು ಆಧುನಿಕ ಅರ್ಥಜ್ಞ ಹೇಗೆ ನಂಬಲಾರನೋ ಹಾಗೆಯೇ ಪುನರ್ ಸೃಷ್ಟಿಯಾಗದ ಸಂಪನ್ಮೂಲಗಳ ಅಧಿಕ ಬಳಕೆ ಕೂಡ ಆರ್ಥಿಕ ಅಭಿವೃದ್ಧಿಯಲ್ಲ. ಅವುಗಳನ್ನು ಜಗತ್ತಿನ ಜನಸಂಖ್ಯೆ ಶಾಶ್ವತವಾಗಿ ಅವಲಂಬಿಸುವುದೂ ಸಾಧ್ಯವಿಲ್ಲ. ನಿಸರ್ಗದ ಮೇಲಿನ ಮನುಷ್ಯನ ಹಿಂಸಾತ್ಮಕ ಚಟುವಟಿಕೆಗಳು ಮನುಷ್ಯ- ಮನುಷ್ಯರ ನಡುವೆ ಹಿಂಸೆಯನ್ನು ಭುಗಿಲೇಳಿಸುತ್ತವೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದ 'ಕ್ಯಾಲಿಫೋರ್ನಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ' ಸಂಸ್ಥೆಯ ಪ್ರೊ॥ ಹ್ಯಾರಿಸ್ ಬ್ರೌನ್ 'The Challenges of Man's Future' ಎನ್ನುವ ಪುಸ್ತಕದಲ್ಲಿ ವಿಶ್ಲೇಷಿಸಿರುವಂತೆ 'ಅತಿ ಕೈಗಾರಿಕೀಕೃತ ಸಮಾಜ ಅಸ್ಥಿರವಾದುದು. ಮತ್ತೆ ಅದು ಪುರಾತನ ಕೃಷಿ ಮೂಲ ವ್ಯವಸ್ಥೆಯತ್ತ ತಿರುಗುವಂತಹುದು.

ವ್ಯಕ್ತಿ ಸ್ವಾತಂತ್ರ್ಯವನ್ನು ಅಸ್ಥಿರಗೊಳಿಸುವ ಅಂಶಗಳನ್ನು ನಿಯಂತ್ರಿಸುವುದು ಅಸಾಧ್ಯವಾದಾಗ ಇಡೀ ನಾಗರಿಕ ಸಮಾಜವೇ ಅಸ್ಥಿರಗೊಳ್ಳುತ್ತದೆ. ಇಂದಿನ ನಮ್ಮ ಮುಖ್ಯ ಪ್ರಶ್ನೆ ಎಂದರೆ ನಾವು ಅನುಸರಿಸುತ್ತಿರುವ ಆಧುನೀಕರಣ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದರಿಂದ ನಮ್ಮನ್ನು ನಿರೀಕ್ಷಿತ ದಿಕ್ಕಿನಲ್ಲಿ ಮುನ್ನಡೆಸುತ್ತದೆಯೇ ಎನ್ನುವುದು.' ಈ ಅನುಮಾನದಿಂದಾಗಿಯೇ ಇಂದು ನಾವು ಆಧ್ಯಾತ್ಮಿಕ ಮೌಲ್ಯಗಳಿಗಿಂತ ಆಧುನಿಕ ಅಭಿವೃದ್ಧಿಯೇ ಮುಖ್ಯ ಎನ್ನುವ ಜನರಿಗೆ ಬೌದ್ಧ ಧರ್ಮೀಯ ಅರ್ಥಶಾಸ್ತ್ರದ ಅನುಷ್ಠಾನವನ್ನು ಶಿಫಾರಸ್ಸು ಮಾಡಬೇಕಾಗಿದೆ.

ಹೀಗೆಂದರೆ 'ಆಧುನಿಕ ಅಭಿವೃದ್ಧಿ' ಮತ್ತು 'ಸಾಂಪ್ರಾದಾಯಕ ಜಡತ್ವ' ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದಲ್ಲ. ಆದರೆ ಅದು ಇವೆರಡರ ಮಧ್ಯೆ ಅನಾಹುತಕಾರಿಯಲ್ಲದ ಅಭಿವೃದ್ಧಿಯ ಮಾರ್ಗವನ್ನು ಕಂಡುಕೊಳ್ಳುವುದಾಗಿದೆ. ಭೌತಸರಕುಗಳ ಬಗೆಗಿನ ದಾಹ ಮತ್ತು ಸಾಂಪ್ರಾದಾಯಿಕ ಸಮಾಜದ ಜಡತ್ವಗಳ ನಡುವೆ ಸರಿದಾರಿಯೊಂದನ್ನು ಅನುಸರಿಸಬೇಕಾಗಿದೆ. ಅದೇ ಬುದ್ಧನ ಅಷ್ಟಾಂಗ ಮಾರ್ಗಗಳಲ್ಲಿ ಒಂದಾದ ಸಜ್ಜೀವನ (Right livilyhood).

(ಈ ಲೇಖನವನ್ನು ಆನಂದಕಂದ ಗ್ರಂಥಮಾಲೆಯ ಜಿ.ಎನ್. ಮಲ್ಲಿಕಾರ್ಜುನ ಅವರ 'ಬೋಧಿ ವೃಕ್ಷದ ಕೆಳಗೆ', ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿ ವಿನ್ಯಾಸಗಳು, ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.)

ಸಾಭಾರ : ಸಂವಾದ ಪತ್ರಿಕೆ

***

ಎರಡನೆ ಪುಟದಿಂದ ......

ಇಲ್ಲ. ಇಲ್ಲಿ ಬಾಳೆ ಸಜ್ಜನರ ಸಂಕೇತವಾದರೆ ಬೋರೆ ದುರ್ಜನರ ಸಂಕೇತ.

ದುಷ್ಟರ ಸಹವಾಸ ಇರಬಾರದು. ದುಷ್ಟನಾದವನು ಸೌತೆಕಾಯಿಯಂತಿರುತ್ತಾನೆ ಮೇಲೆ ಒಂದು ಎಂಬಂತೆ ಕಂಡರೂ ಒಳಗೆ ಮೂರು ಭಾಗಗಳಿರುತ್ತವೆ. ಇಂತಹವರೊಡನೆ ಸ್ನೇಹ ಸಲ್ಲದು.

ದೊಡ್ಡವರು ಸಣ್ಣವರ ಬಗ್ಗೆ ಹೇಳುತ್ತಾ ಶುದ್ಧ ಮನಸ್ಸಿಲ್ಲದ ದೊಡ್ಡವರು ತಾಳೆಯ ಮರದಂತೆ. ನೆರಳೂ ದೊರೆಯದು ಫಲವೂ ಕೈಗೆಟುಕದು. ಆದರೆ ಅಲ್ಪರು ಉದಾರಿಗಳಾಗಿದ್ದರೆ ಅವರಿಂದ ಜೀವಜಂತುಗಳಿಗೆ ಅನುಕೂಲ ಇದೆ. ಕೆಸರಿನಲ್ಲಿರುವ ನೀರೂ ಸಹ ಸಣ್ಣ ಜೀವಿಗಳನ್ನು ಪೋಷಿಸುತ್ತದೆ ಆದರೆ ಸಮುದ್ರ ದೊಡ್ಡದಾದರೂ ನೀರು ಕುಡಿಯಲಾಗದು.

ಸ್ವಾಭಿಮಾನದ ಬಗ್ಗೆ ಹೇಳುತ್ತಾನೆ ಎಂತಹ ಕಷ್ಟ ಬಂದರೂ ಸ್ವಾಭಿಮಾನ ಬಿಡದವನೆ ಸಜ್ಜನ. 'ರಹಿಮನ ಪಾನಿ ರಾಬಿಯೆ ಬಿನ ಪಾನಿ ಸಬ ಸೂನ್' ಇಲ್ಲಿ ನೀರೆಂದರೆ ಅಭಿಮಾನ ನೀರು ಇರಬೇಕು ನೀರು ಇಲ್ಲದಿದ್ದರೆ ಎಲ್ಲವೂ ಶೂನ್ಯ ಅತಿ ಬೆಲೆ ಬಾಳುವ ಮುತ್ತೂ ಸಹ ನೀರಿಲ್ಲದಿದ್ದರೆ ಸುಣ್ಣವಾಗುತ್ತದೆ. ಸ್ವಾಭಿಮಾನವಿಲ್ಲದ ಮನುಷ್ಯನ ಗತಿ ಸುಣ್ಣದ ಗತಿಯೇ.

–ಮೀನಾಕ್ಷಿ ಮಹಿಶಿ

***

ಗಾಂಧೀ ಮತ್ತು ಅಂಬೇಡ್ಕರ್ ಚಿಂತನೆಗಳು

–ಎಚ್. ಎಸ್. ದೊರೆಸ್ವಾಮಿ

ಗಾಂಧೀಜಿ ಮತ್ತು ಅಂಬೇಡ್ಕರ್ ಇಬ್ಬರೂ ದೇಶಭಕ್ತರು. ಗಾಂಧೀಜಿ ಬ್ರಿಟೀಷರ ಆಡಳಿತವನ್ನು ಕೊನೆಗಾಣಿಸುವುದಕ್ಕೆ ಆದ್ಯತೆ ನೀಡಿದ್ದರು. ಆದರೆ ಸ್ವರಾಜ್ಯ ಬಂದ ಮೇಲೆ ನಮ್ಮ ಜನ, ಜನನಾಯಕರು ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕೆಂಬುದೂ ಅವರಿಗೆ ಅಷ್ಟೇ ಮುಖ್ಯವಾಗಿತ್ತು. ಮತ್ತು ಸ್ವಾತಂತ್ರ್ಯವನ್ನು ಅಹಿಂಸಾ ಮಾರ್ಗದಲ್ಲಿ ಸಾಧಿಸುವ ಛಲವೂ ಅವರಿಗಿತ್ತು. ಗಾಂಧೀಜಿ ಜನಾಧಾರಿತವಾಗಿ ಹೋರಾಟದಲ್ಲಿ ತೊಡಗಬೇಕೆಂದು ಬಯಸಿದ್ದರು. ಜನ ಅಹಿಂಸೆಯ ಮಹತ್ವವನ್ನರಿತು. ಅದಕ್ಕನುಗುಣವಾಗಿ ಸ್ವಾತಂತ್ರ್ಯ ಸಮರದಲ್ಲಿ ತೊಡಗಿಕೊಳ್ಳಬೇಕೆಂಬುದೂ ಅವರ ಧ್ಯೇಯವಾಗಿತ್ತು. ಹೀಗಾಗಿ ಜನ ಹಿಂಸಾತ್ಮಕವಾಗಿ ನಡೆದುಕೊಂಡಾಗ ಗಾಂಧೀಜಿ ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ಜನಕ್ಕೆ ಅಹಿಂಸೆಯ ಶಿಕ್ಷಣ ಸಾಕಷ್ಟಾಗಿಲ್ಲವೆಂದು ಅವರು ಭಾವಿಸುತ್ತಿದ್ದರು.

ಅಂಬೇಡ್ಕರ್ ಅವರಿಗೆ ಗಾಂಧೀಜಿಯಷ್ಟೇ ಸ್ವಾತಂತ್ರ್ಯ ಪಡೆಯಬೇಕೆಂಬ ಹಂಬಲವಿತ್ತಾದರೂ ದಲಿತರ, ಹರಿಜನರ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿದಲ್ಲದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಅವರು ನಂಬಿದ್ದರು. ಅದರಿಂದ ಅವರು ಬ್ರಿಟೀಷ್ ಸಾಮ್ರಾಜ್ಯವನ್ನು ಮೊದಲು ದಲಿತರ, ಹರಿಜನರ ಸಾಮಾಜಿಕ ಅಸಮಾನತೆ ಹೋಗಲಾಡಿಸಿ ಆನಂತರ ಸ್ವಾತಂತ್ರ್ಯ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದರು.ಅಂಬೇಡ್ಕರರದು ಪ್ರತಿಗಾಮಿ ನೀತಿ ಎಂದು ಕಾಂಗ್ರೆಸ್ ಭಾವಿಸಿತ್ತು. ಆದರೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಹರಿಜನರ ಮತ್ತು ದಲಿತರ ಪರಿಸ್ಥಿತಿ ಸ್ವಾತಂತ್ರ್ಯ ಪೂರ್ವಕ್ಕಿಂತ ಬೇರೆಯದಾಗಿ ಕಾಣಬರುತ್ತಿಲ್ಲವಾದ್ದರಿಂದ ಅಂಬೇಡ್ಕರರ ಭಯ ನ್ಯಾಯವಾದದ್ದೇ ಆಗಿತ್ತು ಎಂದು ಹೇಳಬಹುದು. ಆದರೆ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದ ಬ್ರಿಟಿಷರು ಹರಿಜನರಿಗೆ, ದಲಿತರಿಗೆ ನ್ಯಾಯ ದೊರಕಿಸಿ ಕೊಡಬಲ್ಲರು ಎಂದು ಅಂಬೇಡ್ಕರರು ಭಾವಿಸಿದ್ದೇ ತಪ್ಪು ಎಂದು ಹೇಳಬಹುದಾಗಿದೆ.

ಗಾಂಧೀಜಿಗೆ ಹರಿಜನರು ಮತ್ತು ದಲಿತರ ಬಗೆಗೆ ಅಂಬೇಡ್ಕರರಿಗಿದ್ದಷ್ಟೇ ಕಾಳಜಿಯಿತ್ತು. ಹರಿಜನರ ಹಕ್ಕು ರಕ್ಷಣೆಗಾಗಿ ಗಾಂಧೀಜಿ ಹರಿಜನರಿಗೆ ಹಿಂದೂ ದೇವಾಲಯಗಳಿಗೆ ಪ್ರವೇಶಾವಕಾಶ ಒದಗಿಸುವುದಕ್ಕಾಗಿ, ಹಿಂದೂಗಳು ಬಳಸುತ್ತಿದ್ದ ಕೆರೆ ಬಾವಿಗಳಲ್ಲಿ ನೀರನ್ನು ಕೊಂಡೊಯ್ಯುವ ಅಧಿಕಾರವನ್ನು ಕೊಡಿಸುವುದಕ್ಕಾಗಿ ಅನೇಕ ಹೋರಾಟಗಳನ್ನು ನಡೆಸಿದರು.

ಅಂಬೇಡ್ಕರರು ಹರಿಜನರಾಗಿದ್ದು ಅವರು ಸ್ವತಃ ಹಿಂದೂಗಳಿಂದ ಅನುಭವಿಸಿದ ಅಪಮಾನ, ಕ್ರೌರ್ಯ, ದೂಷಣೆಗಳು ಲೆಕ್ಕವಿಲ್ಲದಷ್ಟು. ವಿದ್ಯಾವಂತರಾಗಿದ್ದ ಅವರು ತಮ್ಮ ನೌಕರಿ, ಸಂಬಳ, ಐಷಾರಾಮ ಜೀವನ ಇಷ್ಟಕ್ಕೇ ತಮ್ಮ ಜೀವಿತವನ್ನು ಮೀಸಲಾಗಿಡದೆ, ತನ್ನ ಜನದ ಕಷ್ಟ ಕಾರ್ಪಣ್ಯಗಳಿಗೆ, ದುಃಖ ದುಮ್ಮಾನಗಳಿಗೆ, ಸಾಮಾಜಿಕ ಸಮಸ್ಯೆಗಳಿಗೆ ತಮ್ಮನ್ನು ಕೊನೆಯವರೆಗೂ ತೊಡಗಿಸಿಕೊಂಡದ್ದು ಅಂಬೇಡ್ಕರರ ಬಗೆಗೆ ಗೌರವ ಮೂಡಿಸುತ್ತದೆ.

ಗಾಂಧಿಯವರು ಸವರ್ಣೀಯರಾಗಿದ್ದು, ತನ್ನ ಸಮಾಜ ಕಡೆಗಣಿಸಿದ್ದ,

ಕಾಲಕಸವಾಗಿ ಕಾಣುತ್ತಿದ್ದ ಹರಿಜನರ ಬಗೆಗೆ ಕಾಳಜಿ ತೋರಿದ್ದು ವಿಶೇಷವೆನಿಸಿದರೂ ಹರಿಜನರಲ್ಲೇ ಹುಟ್ಟಿ, ಹಿಂದೂ ಸಮಾಜದ ಎಲ್ಲ ದೌರ್ಜನ್ಯವನ್ನು ಸ್ವತಃ ಅನುಭವಿಸಿದ ಅಂಬೇಡ್ಕರ್ ಹಿಂದುಗಳ ಉಪಟಳಕ್ಕೆ ಕೊರಗುತ್ತಾ ಕುಳಿತುಕೊಳ್ಳದೆ. ಅವರ ನಾಲಗೆಯಾಗಿ ಅವರ ಬಾಯಾಗಿ ಹರಿಜನರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಿದ್ದು ಇನ್ನೂ ಹೆಚ್ಚಿನ ಮಹತ್ವದ ವಿಷಯ.

ಇಂಗ್ಲಿಷರು ಒಡೆದು ಆಳುವ ನೀತಿಯನ್ನನುಸರಿಸಿ ಹರಿಜನರನ್ನು ಹಿಂದೂಗಳಿಂದ ಬೇರ್ಪಡಿಸುವ ಉದ್ದೇಶದಿಂದ ಅಸ್ಪೃಶ್ಯ ಪ್ರತ್ಯೇಕ ಚುನಾವಣಾ ಕ್ಷೇತ್ರ ವಿಧಾನವನ್ನು ಜಾರಿ ಮಾಡಿದರು. ಅಂಬೇಡ್ಕರರಿಗೆ ಇದರಿಂದ ಹರಿಜನರ ಕೈ ಬಲಪಡಿಸಬಹುದೆಂಬ ನಂಬಿಕೆಯಿತ್ತು. ಆದ್ದರಿಂದ ಗಾಂಧೀಜಿ ಈ ಅಸ್ಪೃಶ್ಯ ಪ್ರತ್ಯೇಕ ಚುನಾವಣಾ ಕ್ಷೇತ್ರ ವಿಧಾನವನ್ನು ವಾಪಸ್ ಪಡೆಯಬೇಕೆಂದು ಬ್ರಿಟೀಷರನ್ನು ಒತ್ತಾಯಿಸಲು ಆಮರಣ ಉಪವಾಸ ಕೈಗೊಂಡಾಗ ಅಂಬೇಡ್ಕರರ ಮೇಲೆ ಬ್ರಿಟೀಷರ ಈ ನಿಲುವನ್ನು ವಿರೋಧಿಸಬೇಕೆಂದು ಒತ್ತಾಯ ಬಂದಿತು. ಮಹಾತ್ಮರ ಅಮೂಲ್ಯವಾದ ಜೀವವನ್ನು ಉಳಿಸುವ ಸಲುವಾಗಿ ಅಂಬೇಡ್ಕರ್ ತಮ್ಮ ನಿಲುವನ್ನು ಬದಲಾಯಿಸಿಕೊಂಡು ತಮ್ಮ ಬೇಡಿಕೆಯನ್ನು ಹಿಂತೆಗೆದುಕೊಂಡರು. ಆ ಮೂಲಕ ಒಂದು ಗಂಡಾಂತರ ಸಂಭವಿಸುತ್ತಿದ್ದುದನ್ನು ತಪ್ಪಿಸಿದರು.

ರಾಜ್ಯಾಂಗ ಸಭೆ ರಚನೆಯಾಗುವ ಸಂದರ್ಭದಲ್ಲಿ ಅಂಬೇಡ್ಕರರು ಪಾರ್ಲಿಮೆಂಟ್ ಸದಸ್ಯರಾಗಿರಲಿಲ್ಲ. ಆ ಸಾರಿಯ ಪಾರ್ಲಿಮೆಂಟ್ ಚುನಾವಣೆಯಲ್ಲಿ ಅಂಬೇಡ್ಕರ್ ಸೋತಿದ್ದರು. ರಾಜ್ಯಾಂಗ ಸಭೆ ಕೆಲಸ ಮಾಡಲು ಆರಂಭವಾದ ಕೆಲ ದಿನಗಳ ಮೇಲೆ ರಾಜ್ಯಾಂಗ ಸಭೆಯ ಅಧ್ಯಕ್ಷರಾಗಿದ್ದ ಡಾ॥ ರಾಜೇಂದ್ರಪ್ರಸಾದ್ ಗಾಂಧೀಜಿಯನ್ನು ಭೇಟಿ ಮಾಡಿದಾಗ ಅಂಬೇಡ್ಕರರ ವಿದ್ವತ್ತು, ಅನುಭವಗಳನ್ನು ರಾಜ್ಯಾಂಗ ರಚನೆಯ ಸಂದರ್ಭದಲ್ಲಿ ಬಳಸಿಕೊಳ್ಳುವುದು ಅಗತ್ಯವೆಂದು ಮನಗಂಡಿದ್ದ ಗಾಂಧೀಯವರು ಅವರನ್ನು ರಾಜ್ಯಾಂಗ ಸಭೆಯ ಒಬ್ಬ ಸದಸ್ಯರನ್ನಾಗಿ ನೇಮಕಮಾಡಿಕೊಳ್ಳುವ ಸಲಹೆ ಮಾಡಿದರು. ಮುಂದೆ ಅಂಬೇಡ್ಕರರು ರಾಜ್ಯಾಂಗ ರಚನಾ ಸಮಿತಿ ಅಧ್ಯಕ್ಷರಾಗಿ ಆಯ್ಕೆಗೊಂಡರು.

ಗಾಂಧೀಜಿ ಸ್ವರಾಜ್ಯಕ್ಕೆ ಹೋರಾಡಿದ್ದೇ ಕೊನೆಯ ಮನುಷ್ಯನಿಗೂ ಊಟ, ಉದ್ಯೋಗ ದೊರೆಕಿಸುವುದಕ್ಕಾಗಿ. ಸ್ವಾತಂತ್ರ್ಯ ಬಂದು ೫೦ ವರ್ಷ ಸಂದರೂ ಬಡತನದ ಸೀಮಾರೇಖೆಯ ಕೆಳಗೆ ಶೇ೪೦ ರಷ್ಟು ಜನ ಇರುವುದು ಸರ್ಕಾರ ನಡೆಸುವವರು ಈ ಮೂಲಭೂತ ಸಮಸ್ಯೆಯನ್ನು ಕಡೆಗಣಿಸಿರುವುದರ ದ್ಯೋತಕವಾಗಿದೆ.ಆ ದೃಷ್ಟಿಯಿಂದ ಇವರೆಲ್ಲ ಗಾಂಧೀಜಿಗೆ ದ್ರೋಹ ಬಗೆದಿದ್ದಾರೆ.

ಅಂಬೇಡ್ಕರರೂ ಕೂಡ ರಾಜ್ಯಾಂಗ ರಚನೆಯನ್ನು ಮಾಡುವಾಗ ಮೂಲಭೂತವಾಗಿ ಎಲ್ಲರಿಗೂ ವಿದ್ಯೆ, ಉದ್ಯೋಗಾವಕಾಶ ಕಲ್ಪಿಸುವ, ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ತೆಗೆದುಹಾಕುವ ವಿಷಯಗಳಿಗೆ ಒತ್ತುಕೊಟ್ಟಿದ್ದಾರೆ. ಸ್ವತಂತ್ರ ಭಾರತದಲ್ಲಿ ಆರ್ಥಿಕ ಅಸಮಾನತೆ ವರ್ಷ ವರ್ಷ ಬೆಳೆಯುತ್ತಿದೆಯೇ ಹೊರತು ತಗ್ಗಿಸುವ ಪ್ರಯತ್ನ ನಡೆದಿಲ್ಲ. ಕರ್ನಾಟಕದಲ್ಲಿ ಅನಕ್ಷರತೆ ಶೇ೩೭ ರಷ್ಟಿದೆ ಎಂದು ಸರ್ಕಾರಿ ಲೆಕ್ಕ ಹೇಳುತ್ತದೆ. ಇದರಲ್ಲಿ ಬಹುತೇಕ ಮಂದಿ ತಮ್ಮ ಸಹಿ ಹಾಕುವುದನ್ನು ಕಲಿತಿದ್ದಾರೆ ಎಂದರೆ ನಿಜಸ್ಥಿತಿಯನ್ನು ಅರುಹಿದಂತೆ. ನಿರುದ್ಯೋಗವಂತೂ ತಾಂಡವವಾಡುತ್ತಿದೆ. ದಲಿತರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ. ಒಟ್ಟಿನಲ್ಲಿ ನಮ್ಮ ರಾಜ್ಯಾಂಗದ ಆಶಯಗಳೂ ನೆರವೇರಿಲ್ಲ. ಗಾಂಧಿ ಮತ್ತು ಅಂಬೇಡ್ಕರ್ ಅವರು ನಮ್ಮ ಮುಂದೆ ಇಟ್ಟ ಆದರ್ಶಗಳೂ ಪೂರೈಕೆಯಾಗಲಿಲ್ಲ.

***

ಗಾಂಧಿ ಅನುಯಾಯಿಗಳು ಚಳುವಳಿ ಹೂಡಬೇಕಿದೆ

–ಶೇಷರಾವ್ ಚವ್ಹಾಣ್

ಒಂದು ಕಾಲದಲ್ಲಿ ಭಾರತ ಜಗತ್ತಿನ ಭವಿಷ್ಯ, ಭಾರಿ ಸತ್ವವುಳ್ಳ ದೇಶ ಎಂಬ ಭಾವನೆ ಇತ್ತು. ಅದು ಈ ದೇಶ ಗುಲಾಮಗಿರಿಯಲ್ಲಿದ್ದಾಗ. ಸ್ವಾತಂತ್ರ್ಯ ಬಂತು. ಚಿತ್ರ ಬದಲಾಯಿತು. ಇಲ್ಲಿ ಶಕ್ತಿ ಬೇಕಾದಷ್ಟಿದೆ ನಿಜ. ಆದರೆ ನೀತಿ ಎನ್ನುವುದೇ ವಿರಳವಾಗುತ್ತಿದೆ.

ಬಹುಪಾಲು ಒಳ್ಳೆಯ ಜನ, ಅದರಲ್ಲೂ ಬುದ್ಧಿವಂತರು, ಆರಾಮದ ಬದುಕಿಗೆ ಒಲಿದು ಅಥವಾ ಇಷ್ಟವಿಲ್ಲದೆ ಅಥವಾ ಹೇಡಿಗಳಾಗಿ, ತಮ್ಮ ಪಾಡಿಗೆ ತಾವು ದೂರ ಇದ್ದಾರೆ. ಆದರೆ ಅವರದು ಭ್ರಮಾಲೋಕ. ಕೆಡುಕಿನ ಶಕ್ತಿಗಳು ಬಲಗೊಂಡಾಗ, ಈ ಸಜ್ಜನರ ನೆಮ್ಮದಿ ಗಾಳಿಪಾಲಾಗುತ್ತದೆ. ಸಾಧುಜನರೇ ದೊಂಬಿಗೆ ಮೊದಲ ಬಲಿ.

ಸಜ್ಜನರು ಹಿಂದೆ ಸರಿದರೆ ಗೂಂಡಾಗಳು ತುಂಬಿಕೊಳ್ಳುತ್ತಾರೆ ಎಂದು ಮಹರ್ಷಿ ಅರವಿಂದರು ಎಚ್ಚರಿಸಿದ್ದರು. ಆ ಋಷಿವಾಣಿ ಈಗ ನಿಜವಾಗಿದೆ. ಸಜ್ಜನರು, ಬುದ್ಧಿವಂತರು ಸಾರ್ವಜನಿಕ ಜೀವನದಿಂದ ದೂರ ನಿಲ್ಲುವಂತಿಲ್ಲ. ಸಮಾಜದ ಒಳತಿಗೆ, ಸ್ವಾಸ್ಥ್ಯಕ್ಕೆ ಅಂತಹವರ ಕೊಡುಗೆ, ಪ್ರಯತ್ನ ಅತ್ಯವಶ್ಯ.

ಇಂಥ ದುರ್ದೆಸೆಯಿಂದ ನಮಗೆ ಮುಕ್ತಿ ಸಾಧ್ಯವೇ? ಭಾರತ ತನ್ನ ಮುಂದೆ ಇರುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬಲ್ಲದೇ? ಸಾಧ್ಯ, ಎದುರಿಸಬಲ್ಲದು. ಆದರೆ ಅದಕ್ಕೆ ಒಂದೇ ದಾರಿ. ಗಾಂಧೀಜಿಯ ಪ್ರಸ್ತುತತೆಯನ್ನು ಅರಿತುಕೊಳ್ಳುವುದು ಮತ್ತು ಅವರ ದಾರಿಯಲ್ಲಿ ನಡೆಯುವುದು. ಗಾಂಧೀ ಇಲ್ಲದೆ ಭಾರತದ ಮುನ್ನಡೆ ಎಲ್ಲಿ?

ಗಾಂಧೀಜಿ ಜನತೆಯ ವ್ಯಕ್ತಿ. ಸಾಮಾನ್ಯರಿಗೆ ಅಲಭ್ಯವಾದುದು ತನಗೂ ಬೇಡ ಎನ್ನುತ್ತಿದ್ದರು. ಭಾರತದಲ್ಲಿ ಶ್ರೀ ಸಾಮಾನ್ಯ ತನ್ನ ಭವಿಷ್ಯದ ರೂವಾರಿ ತಾನೇ ಆಗಬೇಕು, ಭಾರತ ತನ್ನಕಾಲ ಮೇಲೆ ತಾನು ನಿಲ್ಲಬೇಕು, ಎಲ್ಲರಿಗೂ ಜೀವನದ ಅಗತ್ಯಗಳು ಪೂರೈಸಬೇಕು, ಅರಸರು ಆಳಾಗಿರಬೇಕು, ಒಡೆಯರಾಗಬಾರದು ಇದು ಅವರ ಕನಸಾಗಿತ್ತು.

ಅವಕಾಶ ಸಿಕ್ಕರೆ ಮಂತ್ರಿಗಳೇ ಮಹಾರಾಜರಾಗಿ ಹೋದಾರು ಎಂಬ ಶಂಕೆ ಅವರಿಗೆ ಇತ್ತು. ಮಂತ್ರಿಗಳಿಗೆ ಒಂದು ಆಚಾರ ಸಂಹಿತೆ, ಸರಳ ಜೀವನ ಬೋಧಿಸಿದರು. "ಮಂತ್ರಿಗಳು ಸೀಸರನ ಹೆಂಡತಿ ಹಾಗೆ ಶಂಕಾತೀತರಾಗಿರಬೇಕು. ಅಧಿಕಾರ ಅವರಿಗೆ ಸೇವೆಯ ಸಾಧನವಾಗಿರಬೇಕು. ಕಿಂಚತ್ತೂ ಸ್ವಲಾಭದೃಷ್ಟಿ ಇರಬಾರದು ಹಾಗೂ ಅಧಿಕಾರ ಪೀಠಕ್ಕಂಟಿಕೊಳ್ಳಬಾರದು ಎಂದರು."

ಒಮ್ಮೆ ಒಬ್ಬ ಪತ್ರಕರ್ತ ಅವರನ್ನು ಕೇಳಿದ, "ಬಾಪೂಜೀ, ನಿಮ್ಮ ಆದರ್ಶ, ಆಚರಣೆಗಳ ಬಲದಿಂದ ಭಾರತ ಇಂದಿನ ಸ್ಥಾನಗಳಿಸಿದೆ. ಈಗ ನಾವು ಅಟ್ಟ ಏರಿ, ಏಣಿಯನ್ನೇ ಒದೆಯುತ್ತಿದ್ದೇವಲ್ಲ! ನಿಮ್ಮನ್ನು ಕಾಂಗ್ರೆಸ್ಸಿಗರು ಜೀವಂತ ಸಮಾಧಿ ಮಾಡಿಲ್ಲವೇ? ಗಾಂಧೀಜಿ ಹೀಗೆ ಉತ್ತರಿಸಿದರು, "ನನ್ನ ಸಮಾಧಿ ಇನ್ನೂ ಆಗಿಲ್ಲ" ಎಂದು ನನ್ನ ಭಾವನೆ. ಅದಕ್ಕೆ ಆಧಾರ ಜನಕೋಟಿ ನನ್ನ ಆದರ್ಶಗಳಲ್ಲಿ ಇನ್ನೂ ನಂಬಿಕೆ ಕಳೆದುಕೊಂಡಿಲ್ಲ. ಕಳೆದುಕೊಂಡರೆ ಆಗ ಅವರೂ ಇಲ್ಲ, ನನಗೂ ಜೀವಂತ ಸಮಾಧಿ. ಆದರೆ ನನ್ನಲ್ಲಿ

ವಿಶ್ವಾಸದ ದೀಪದ ಕುಡಿ ಆರದಂತೆ ಉಳಿದಿರುವವರೆಗೂ ನಾನು ಒಂಟಿಯಾಗಿರಲಿ, ಸಮಾಧಿಯಲ್ಲಿ ಹೂತುಹೋಗಿರಲಿ, ಅಲ್ಲಿಂದಲೇ ನಾನು ಮಾತನಾಡುತ್ತೇನೆ. ನಿಜ ಈಗ ಅವರ ದನಿ ಸಮಾಧಿಯಿಂದ ಕೇಳಿಬರುತ್ತಿದೆ.

ಗಾಂಧೀಜಿ ಎಚ್ಚರಿಸಿದ್ದರು, " ಗಾಳಿ ಬೀಸುತ್ತಿದೆ ಜನ ಎಚ್ಚೆತ್ತುಕೊಳ್ಳುತ್ತಿದ್ದಾರೆ ಅವರ ಭಾವನೆಗಳನ್ನು ತಳ್ಳಿಹಾಕುವಂತಿಲ್ಲ. ಪರಿಸ್ಥಿತಿ ಹೀಗೆಯೇ ಕೆಡುತ್ತಾ ಹೋದರೆ, ಬಿರುಗಾಳಿ ಬೀಸುತ್ತದೆ. ಅದನ್ನು ನಿವಾರಿಸುವುದು ಕಷ್ಟವಾದೀತು. ಸುತ್ತ ನೋಡಿದರೆ ಧೂಳು ಏಳುವುದು ಕಾಣಿಸುತ್ತಿದೆ." ಈಗ ಸ್ಪಷ್ಟವಾಗಿ ಗಾಳಿ ಏಳುತ್ತಿದೆ.

ಗಾಂಧಿ ಹತ್ಯೆಗೆ ಸ್ವಲ್ಪ ಮುಂಚೆ ಡಾ॥ ಸುಶೀಲಾ ನಯ್ಯರ್ ಕೇಳಿದ್ದರು "ಬಾಪೂ, ನೀವು ಸಮಾಜ ಸುಧಾರಕರು ಎಂದುಕೊಳ್ಳುತ್ತೀರಿ. ಈಗ ಭಾರತ ಸ್ವತಂತ್ರ. ಇನ್ನು ಸಮಾಜ ಸುಧಾರಣೆ ತಾನೇ ನಿಮ್ಮ ಲಕ್ಷ್ಯ?"

" ನನ್ನ ಪರಿಕಲ್ಪನೆಯ ಸ್ವಾತಂತ್ರ್ಯ ಎಲ್ಲಿ ಬಂದಿದೆ? ಈ ಕೋಮು ವಿದ್ವೇಷದ ಬೆಂಕಿಯನ್ನು ದಾಟಿ ನಾನು ಉಳಿದರೆ, ರಾಜಕಾರಣದ ಶುದ್ಧೀಕರಣವೇ ನನ್ನ ಮೊದಲ ಕೆಲಸ" ಇದು ಗಾಂಧೀಜಿಯ ಉತ್ತರ.

ನಮ್ಮ ರಾಜಕಾರಣಿಗಳು, ನಾಯಕರು, ಅಹಿಂಸಾಮಾರ್ಗದಲ್ಲಿ, ಈ ಶುದ್ಧೀಕರಣ ಕಾರ್ಯ ಕೈಗೊಳ್ಳಬೇಕಾಗಿದೆ. ಅಧಿಕಾರವನ್ನು ಸೇವೆಯ ಸಾಧನ ಮಾಡಬೇಕಾಗಿದೆ.

ಯುವ ಜನರ ಅಶಿಸ್ತಿನ ಹೆಚ್ಚಳ ಗಾಂಧೀಯವರನ್ನು ಚಿಂತೆಗೆ ಈಡುಮಾಡಿತ್ತು.

೧) ದೇವರು ನಡೆಸಿದರೆ ಮತ್ತೆ ಯುವಜನರನ್ನು ರಾಷ್ಟ್ರಸೇವೆಗೆ ಕರೆಯುತ್ತೇನೆ, ಹಿಂದೆ ಚಳುವಳಿಗೆ ಕರೆದಂತೆ.

೨) ಶ್ರೀ ಸಾಮಾನ್ಯರ ಸೇವೆ ಅವರಿಗೆ ಧನ್ಯತೆ ತರುವಂತೆ ಆಗಬೇಕು. ಜನ ಈ ಸುವರ್ಣಾವಕಾಶವನ್ನು ಕೈಹಿಡಿದು, ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವಂತೆ ಪ್ರೇರೆಪಿಸಲು ಭಾರತ ಯಾತ್ರೆ ಕೈಗೊಳ್ಳುತ್ತೇನೆ.

೩) ನಾಯಕರು ತಮ್ಮ ವಚನ ಪಾಲಿಸುವಂತೆ ಜನ ಒತ್ತಾಯಿಸಬೇಕು ಎನ್ನುತ್ತೇನೆ.

ಗಾಂಧೀಜಿಯ ನಿಜವಾದ ಅನುಯಾಯಿಗಳು ಅಧಿಕಾರ ಸ್ಥಾನಗಳಲ್ಲಿ ಇಲ್ಲ ಈಗ. ಅವರು ಧೈರ್ಯದಿಂದ ಹೊರಬಂದು ಚಳುವಳಿ ಹೂಡಬೇಕಾಗಿದೆ. ಚಳುವಳಿಗೆ ಅಲಕ್ಷ್ಯ, ಅವಹೇಳನ, ಅಪನಿಂದೆ, ದಮನ, ಕೊನೆಗೆ ಆದರ ಸಿಗಬಹುದು ಗಾಂಧೀಜಿ ಹೇಳಿದ್ದಂತೆ. " ದಮನವನ್ನು ತಾಳಿ ಉಳಿದುಕೊಳ್ಳುವ ಚಳುವಳಿ ಆದರ ಪಡೆದೀತು. ಅದೇ ಗೆಲವು" ಎಂದೂ ಅವರು ಹೇಳಿದ್ದರು. " ಚೆದುರಿಹೋದ ಹನಿಗಳು ಕಲೆತರೆ, ಸಾಗರದ ಭವ್ಯತೆಯನ್ನು ಅನುಭವಿಸಬಹುದು." ಎಂದೂ ಹೇಳಿದ್ದರು. ಹನಿಗಳು ಕಲೆಯುವ ಕಾಲ ಬಂದಿದೆ ಅಲ್ಲವೇ!

ಅನು–ನೀಲತ್ತಹಳ್ಳಿ ಕಸ್ತೂರಿ

(ಭವನ್ಸ್ ಜರ್ನಲ್–ಸಾಭಾರ)

*****

ಅಗ್ರಮಾನ್ಯ ಗಾಯಕಿ ಗಂಗೂಬಾಯಿ ಹಾನಗಲ್

ಡಾ॥ ಮಧು ಉಪಾಧ್ಯಾಯ

(ಶಾಸ್ತ್ರಿಯ ಹಿಂದೂಸ್ತಾನಿ ಸಂಗೀತದ ಸಾಮ್ರಾಜ್ಞಿ ಕನ್ನಡತಿ ಗಂಗೂಬಾಯಿ ಹಾನಗಲ್ ಅವರಿಗೆ ೦೫-೦೩-೨೦೦೫ ಕ್ಕೆ ೯೪ ವರ್ಷಗಳು ತುಂಬಿದವು ಆದ್ದರಿಂದ ಜನಪದ ವಿಚಾರ ತನ್ನ ಹೃದಯಾಂತರಾಳದ ನಮನವನ್ನು ಸಲ್ಲಿಸುತ್ತಾ ಈ ಲೇಖನವನ್ನು ಪ್ರಕಟಿಸಿದೆ. -ಸಂ)

ಶಾಸ್ತ್ರೀಯ ಹಿಂದೂಸ್ತಾನಿ ಸಂಗೀತದ ಉನ್ನತ ಸೋಪಾನದಲ್ಲಿ ಸರಿಸುಮಾರು ಐವತ್ತು ವರ್ಷಗಳ ಕಾಲದಿಂದ ಒಂದು ಗಾಢವಾದ ರೋಮಾಂಚನಕಾರಿ ಪುರುಷ ರೀತಿಯ ಧ್ವನಿ ವಿಜೃಂಭಿಸುತ್ತಿದೆ. ಈ ದನಿಯೇ ಗಂಗೂಬಾಯ್ ಹಾನ್‌ಗಲ್. ಕರೀಮ್‌ಖಾನ್, ಸವಾಯ್ ಗಂಧರ್ವ, ಪಂಡಿತ್ ಭೀಮಸೇನ ಜೋಶಿಯವರಂತಹ ಪ್ರತಿಭಾವಂತರನ್ನು ಕೊಟ್ಟಿರುವ ವಿಶಿಷ್ಟವಾದ ಕಿರಾನಾ-ಘರಾನೆಯ ಯಥಾವತ್ ಸೂತ್ರಗಳಿಗೆ ಬದ್ಧವಾಗಿರುವ ಗಂಗೂಬಾಯಿ ಹಾನ್‌ಗಲ್ ತಮ್ಮ ಕೊಡುಗೆಯಿಂದ ಈ ಪರಂಪರೆಯನ್ನೂ ಶ್ರೀಮಂತಗೊಳಿಸಿದ್ದಾರೆ.

ಸಂಗೀತ ಸಮ್ಮೇಳನಗಳನ್ನು ನಡೆಸುವುದು ಮೂವತ್ತು ಹಾಗೂ ನಲವತ್ತರ ದಶಕಗಳಲ್ಲಿ ಜನಪ್ರಿಯ ಲಕ್ಷಣವಾಗಿತ್ತು. ಸಂಗೀತ ಪರಂಪರೆಯಿರುವ ಪ್ರತಿಯೊಂದು ನಗರದವರೂ ಪರಸ್ಪರ ಪೈಪೋಟಿಯಿಂದ ತಮ್ಮ ನಗರಗಳಲ್ಲಿ ಸಂಗೀತ ಸಮ್ಮೇಳನಗಳನ್ನು ನಡೆಸುತ್ತಿದ್ದರು. ದೇಶದ ಎಲ್ಲೆಡೆಗಳಿಂದ ಉತ್ತಮ ಪ್ರತಿಭೆಗಳನ್ನು ಕರೆಸುತ್ತಿದ್ದರು. ಗಂಗೂಬಾಯಿ ಹಾನ್‌ಗಲ್, (ದೆಹಲಿ) ಆಕಾಶವಾಣಿಗೆ ತಮ್ಮಮೊದಲ ಕಾರ್ಯಕ್ರಮ ನೀಡಿದಾಗ ಅವರ ವಯಸ್ಸು ಇಪ್ಪತ್ತೈದು. ತಂಬೂರಿ ಹಿಡಿದು ಆಕಾಶವಾಣಿ ಕಟ್ಟಡವನ್ನು ಪ್ರವೇಶಿಸಿದಾಗ, ವರಾಂಡದಲ್ಲಿ ಕಾಯುತ್ತಿರುವಂತೆ ಆಕೆಗೆ ತಿಳಿಸಲಾಯಿತು. ತಂಬೂರಿಯನ್ನು ತಾವೇ ಸ್ವತಃ ಹಿಡಿದು ಸ್ಟುಡಿಯೋದೊಳಗೆ ಪ್ರವೇಶಿಸಿದ ಆಕೆ ಸ್ಮರಣೀಯವಾಗಿ ಹಾಡಿದ್ದು ಅಲ್ಲಿನ ಅಧಿಕಾರಿಗಳ ಮೇಲೆ ತುಂಬ ಪರಿಣಾಮ ಬೀರಿತ್ತು. ಅನಂತರ ಅವರು ತಮ್ಮ ಅನುಚಿತ ನಡುವಳಿಕೆಯ ಬಗ್ಗೆ ಆಕೆಯಲ್ಲಿ ಕ್ಷಮೆ ಕೋರಿದರು. ಗಂಗೂಬಾಯಿಯವರನ್ನು ಕಲ್ಕತ್ತಾದ ಸಂಗೀತ ಸಮ್ಮೇಳನಕ್ಕೆ ಆಹ್ವಾನಿಸಲಾಗಿತ್ತು. ಈ ಪುಟ್ಟ ಆಕಾರದ ಮಹಿಳೆಯನ್ನು ನೋಡಿ ಅಲ್ಲಿನ ವ್ಯವಸ್ಥಾಪಕರಿಗೆ ಅಚ್ಚರಿಯಾಯಿತು. ಒಬ್ಬ ಉಸ್ತಾದರಂತೂ ಇಷ್ಟು ದುರ್ಬಲ ದೇಹದ ಹೆಂಗಸು ಹಿಂದೂಸ್ತಾನಿ ಸಂಗೀತದ ಶಕ್ತಿಯುತವಾದ ಶೈಲಿಯಲ್ಲಿ ಹೇಗೆ ಹಾಡಿಯಾಳು ಎಂದು ಅಚ್ಚರಿವ್ಯಕ್ತಪಡಿಸಿದರು.

ವ್ಯವಸ್ಥಾಪಕರಲ್ಲೊಬ್ಬರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗಂಗೂಬಾಯಿ ಅವರು ಹಾಡುವ ಮುಂಚೆ ಧ್ವನಿಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಒತ್ತಾಯಿಸಿದರು. ಧ್ವನಿಪರೀಕ್ಷೆಯ ನಂತರ ವ್ಯವಸ್ಥಾಪಕರು ತಮ್ಮ ಮೊದಲಿನ ವರ್ತನೆಗಾಗಿ ವಿಷಾದ ವ್ಯಕ್ತಪಡಿಸಿದರು. ಗಂಗೂಬಾಯಿ ಗಾಯನ ಪ್ರತಿಷ್ಠಿತ

ಶ್ರೋತೃಗಳ ಗಮನ ಸೆಳೆಯಿತು. ಅವರನ್ನು ಅಭಿನಂದಿಸಿ ಗೌರವಿಸಲಾಯಿತು.

ಪುಣೆ ಮತ್ತು ಮುಂಬಯಿಯ ಪ್ರತಿಷ್ಠಿತ ಶ್ರೋತೃಗಳ ಮುಂದೆ ಹಾಡಬಯಸಿದ ಈ ಕಿರಿಯ ಕಲಾವಿದೆಯನ್ನು ಚಿತ್ತೊಪಂತ್‌ಗುರವ್‌ರಂತಹ ಅನುಭವೀ ಕಲಾವಿದರೂ ಛೀತ್ಕರಿಸಿದ್ದುಂಟು. ಆದರೆ ಗಂಗೂಬಾಯಿಯ ಹಾಡುವಿಕೆಯನ್ನು ಕೇಳಿದ ನಂತರ ಈ ಮಹಾನ್ ಪಂಡಿತ ನಿಜಕ್ಕೂ ಪ್ರಭಾವಿತರಾದರು. ಆಕೆಯನ್ನು ಪ್ರೀತಿಯಿಂದ ಹರಿಸಿದರು. ಗಂಗೂಬಾಯಿ ಈಗ ತಮ್ಮ ಸಂಗೀತ ಸಾಧನೆಯ ಮೇರು ಶಿಖರದಲ್ಲಿದ್ದರೂ ಸಹ ಈ ಎಲ್ಲ ಘಟನೆಗಳನ್ನೂ ಯಾವುದೇ ಕಹಿಭಾವನೆಯಾಗಲೀ, ಹಗೆಯಾಗಲೀ ಇಲ್ಲದೆ ಜ್ಞಾಪಿಸಿಕೊಳ್ಳುತ್ತಾರೆ. ಕನ್ನಡದ ಹಿರಿಯ ಕವಿ, ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಗಂಗೂಬಾಯಿಯನ್ನು ಕುರಿತು, 'ಜೀವಿತಾವಧಿಯಲ್ಲಿ ತನ್ನ ಹಾಡುಗಾರಿಕೆಯನ್ನು ಪೂರ್ಣಗೊಳಿಸಲಾಗದ ಉಸ್ತಾದನೊಬ್ಬ ಈಕೆಯ ಮೂಲಕ ಹಾಡುತ್ತಿದ್ದಾನೆ' ಎಂದು ಹೇಳಿದ್ದರು.

ಗಂಗೂಬಾಯಿಯ ಕುಟುಂಬದಲ್ಲಿ ಸಂಗೀತದ ಪರಂಪರೆ ಹರಿದುಬಂದಿದೆ. ಅವರ ತಾಯಿ ಅಂಬಾಬಾಯಿ ಮತ್ತು ಅಜ್ಜಿ ಕಮಲಾಬಾಯಿಯವರು ಹೆಸರಾಂತ ಕಲಾವಿದೆಯಾಗಿದ್ದರು. ಅಂಬಾಬಾಯಿ ಕರ್ನಾಟಕ ಸಂಗೀತದ ಉತ್ಸಾಹಿ ಶಿಷ್ಯೆ ಹಾಗೂ ಸಾಧಕಿಯಾಗಿದ್ದರು. ಮತ್ತು ಹೆಸರಾಂತ ನೃತ್ಯಗಾರ್ತಿಯೂ ಆಗಿದ್ದರು. ಆಕೆ ಉಸ್ತಾದ್ ಇಮಾಮ್ ಸಾಹೇಬರ ಶಿಷ್ಯೆಯಾಗಿದ್ದು ತ್ಯಾಗರಾಜರ ರಚನೆಗಳು ಸಂತ ಹರಿದಾಸರ ಪದ್ಯಗಳು ಹಾಗೂ ಗೀತ ಗೋವಿಂದ ರಚನೆಗಳ ಬಗ್ಗೆ ಬೃಹತ್ ಟಿಪ್ಪಣಿಗಳನ್ನು ಮಾಡಿದ್ದರು.

ಗಂಗೂಬಾಯಿ ಇನ್ನೂ ೮ ವರ್ಷದ ಬಾಲಕಿಯಾಗಿದ್ದಾಗಲೇ ಅವರ ಸಂಗೀತ ಶಿಕ್ಷಣ ಆರಂಭವಾಯಿತು.ಮೊದಲು ಅವರು ಕಲಿತದ್ದು ಕುಗ್ಲೂರ್ ಕೃಷ್ಣಾಚಾರ್ ಸಂಗೀತ ಶಾಲೆಯಲ್ಲಿ. ಅನಂತರ ಹುಬ್ಬಳ್ಳಿಯ ದತ್ತೊಪಂತ್ ದೇಸಾಯಿಯವರಲ್ಲಿ, ಆದಾಗ್ಯೂ ಆಕೆಯ ದೊಡ್ಡ ಗುರುಗಳೆಂದರೆ ಸವಾಯ್ ಗಂಧರ್ವ. ಇವರು ಹುಬ್ಬಳ್ಳಿಯ ಸಮೀಪದ ಕುಂದಗೋಳದಲ್ಲಿ ನೆಲೆಸಿದ್ದರು. ಇದು ಈ ಕಿರಿಯ ಮತ್ತು ಉತ್ಸಾಹೀ ಶಿಷ್ಯೆಗೆ ಅನುಕೂಲವಾಯಿತು. ಈ ಗುರುವಿನ ವಾತ್ಸಲ್ಯಪೂರಿತ ನಿಕಟ ಮಾರ್ಗದರ್ಶನದಲ್ಲಿ ಆಕೆ ಐದು ವರ್ಷಕಾಲ ಹಿಂದೂಸ್ತಾನಿ ಸಂಗೀತವನ್ನು ಅಭ್ಯಾಸಮಾಡಿದರು. ಈ ಗುರು ಶಿಷ್ಯ ಪರಂಪರೆ ಎಷ್ಟು ಆದರ್ಶಪೂರ್ಣವಾಗಿತ್ತೆಂದರೆ, ಗುರುವು ಪಾರ್ಶ್ವವಾಯುಪೀಡಿತರಾದಾಗ ಅವರನ್ನು ಗಂಗೂಬಾಯಿ ತಮ್ಮ ಮನೆಯಲ್ಲಿ ಎರಡು ವರ್ಷಕಾಲ ಇರಿಸಿಕೊಂಡು ಆರೈಕೆ ಮಾಡಿದರು. ಗಂಗೂಬಾಯಿಗೆ ತಮ್ಮ ಗುರುವಿನ ಬಗ್ಗೆ ಆರಾಧನಾ ಭಾವನೆ ಇತ್ತು. ಅವರ ಸೃಜನಶೀಲ ಪ್ರತಿಭೆ, ಭೋಧನೆಯ ವಿಶಿಷ್ಟ ತಂತ್ರ ಹಾಗೂ ಇದಕ್ಕಿಂತ ಮುಖ್ಯವಾಗಿ ಸಹ ಮಾನವಜೀವಿಗಳ ಬಗ್ಗೆ ಅವರು ಹೊಂದಿದ್ದ ಒಲವು ಇವುಗಳನ್ನು ಗಂಗೂಬಾಯಿ ತಮ್ಮ ವಿಶೇಷ ಲೇಖನದಲ್ಲಿ ಸ್ತುತಿಸಿದ್ದಾರೆ..

ಗಂಭೀರವಾದ ಖಯಾಲ್ ಹಾಗೂ ನಾಜುಕು ಠುಮ್ರಿಗಳು ಗಂಗೂಬಾಯಿಯವರ ಹಾಡುಗಾರಿಕೆಯಲ್ಲಿ ಉಜ್ವಲಗೊಳ್ಳುತ್ತವೆ. ಎಲ್ಲಾ ರಾಗಗಳನ್ನೂ ಅವರು ಪರಿಪೂರ್ಣ ಕಲಾವಂತಿಕೆಯಿಂದ ಹಾಡುತ್ತಾರಾದರೂ ತೋಡಿ ಮಾರ್ವಾ ಹಾಗೂ ಮಿಯಾಮಲ್ಹಾರ್‌ಗಳನ್ನು ಅವರು ಪ್ರಸ್ತುತ ಪಡಿಸುವ ರೀತಿ ಅನನ್ಯವಾದುದ್ದು. ಜಯಜಯವಂತಿಯಲ್ಲಿನ ಅವರ ರಚನೆಗಳು ಸಂಗೀತ ಕುಶಲಕಲೆಯ ಅವಿಸ್ಮರಣೀಯ ಅಂಶಗಳಾಗಿವೆ.

ಭಾರೀ ಪ್ರಮಾಣದಲ್ಲಿ ಮನ್ನಣೆ ಮತ್ತು ಗೌರವಗಳು ದೊರೆತಿದ್ದರೂ ಗಂಗೂಬಾಯಿ ಮೊದಲಿನಂತೆಯೇ ಯಾವುದೇ ಆಡಂಬರ ತೋರಿಕೆಗಳಿಲ್ಲದ ವ್ಯಕ್ತಿ. ೧೯೬೩ ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ಅವರಿಗೆ ಸದಸ್ಯತ್ವ ನೀಡಿತು. ೧೯೭೧ ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಯಿತು.

ಭಾರತೀಯ ಸಂಗೀತ ಕುರಿತು ಅವರ ದೃಷ್ಟಿ ಏನೆಂದು ಕೇಳಿದಾಗ ಆಕೆ ಹೇಳಿದರು. 'ಸಂಗೀತವನ್ನು ಹಾಡಬೇಕು ಮತ್ತು ಕೇಳಬೇಕು. ಅದರ ಬಗ್ಗೆ ಮಾತಾಡುವಂಥದ್ದೇನೂ ಇಲ್ಲ'. ಮಗಳು ಕೃಷ್ಣ ಹಾನಗಲ್ ಸಹ ತಾಯಿಯಿಂದಲೇ ತರಬೇತಿ ಪಡೆದು ರೂಪುಗೊಂಡಿರುವ ಕಲಾವಿದೆ.

ಭಾರತೀಯ ಸಂಗೀತಕ್ಕೆ ನೀಡಿದ ಕೊಡುಗೆಗಾಗಿ ಗಂಗೂಬಾಯಿ ಅವರಿಗೆ ೧೯೮೯ ರಲ್ಲಿ ಭೂವಲ್ಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಗೌರವದ ಮೂಲಕ ಅವರ ಹೆಸರು ಉದಯಶಂಕರ್, ಹೀರಾಬಾಯಿ ಬಡೋದೆಕರ್, ಉಸ್ತಾದ್ ಅಮಿನುದ್ದೀನ್‌ಡಾಗರ್ ಅವರ ಸಾಲಿಗೆ ಸೇರಿತು.

ಗಂಗೂಬಾಯಿಯವರ ವಯಸ್ಸು ಅವರ ಹಾಡುಗಾರಿಕೆಯ ಮೇಲೆ ತನ್ನ ನೆರಳು ಚಾಚಿಲ್ಲ. ಅದೇ ಉತ್ಸಾಹದಿಂದ ಅವರು ಈಗಲೂ ಹಾಡುತ್ತಾರೆ.

ಗಂಗೂಬಾಯಿಯವರ ೯೪ ನೆ ವರ್ಷದ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯ ಸಾರಾಂಶಗಳು.

ಗಂಗೂಬಾಯಿಯವರು ೧೧ ಪ್ರಧಾನ ಮಂತ್ರಿಗಳಿಂದ ಗೌರವಿಸಲ್ಪಟ್ಟಿದ್ದಾರೆ ಮತ್ತು ೪೫ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಸುಪ್ರಸಿದ್ಧ ಧಾರವಾಡ ಪೇಢ ತಯಾರಿಕೆಯ ಮಿಶ್ರಾಪೇಢ ಕಂಪನಿಯವರು ೯೪ ಕೆ.ಜಿ.ಪೇಢೆಯನ್ನು ಡಾ||ಗಂಗೂಬಾಯಿಯವರಿಗೆ ಅರ್ಪಿಸಿದರು ಅದನ್ನು ಅವರು ಅಂಗವಿಕಲ ಮಕ್ಕಳಿಗೆ ಹಂಚಿದರು. ಆ ದಿನದ ಸಮಾರಂಭವನ್ನು ಕುರಿತು ಗೋಪಾಲ ಕೃಷ್ಣ ಹೆಗಡೆಯವರು ಪ್ರಜಾವಾಣಿಯಲ್ಲಿ ಈ ರೀತಿ ವರದಿ ಮಾಡಿದ್ದಾರೆ.

'ನೀನು ನನಗೇನಾಗಬೇಕೆಂದು ನಾನು ಹೇಗೆ ಹೇಳಲಿ, ನೀನು ನನ್ನ ಜೀವನದ ಪ್ರೀತಿ, ಸಂಗೀತ. ಅಮ್ಮ,ನಿನ್ನಷ್ಟು ಎತ್ತರಕ್ಕೆ ಏರಲು ನನ್ನಿಂದ ಸಾಧ್ಯವಿಲ್ಲ. ನೀನು ನೂರು ವರ್ಷ ಬಾಳಬೇಕು, ಅದರೊಂದಿಗೆ ಗಾಯನ ಗಂಗೆಯ ಜೀವನದಿ ಸದಾ ಹರಿಯುತ್ತಿರಬೇಕು' ಎಂದು ಖ್ಯಾತ ನಟ ನಾನಾ ಪಾಟೇಕರ್ ಭಾವುಕರಾಗಿ ನುಡಿದಾಗ, ಸಂಗೀತ ಸಾಮ್ರಾಜ್ಞಿ ಗಂಗೂಬಾಯಿ ಹಾನಗಲ್ ಅವರ ೯೪ ನೇ

ಜನ್ಮದಿನ ಆಚರಿಸಲು ಬಂದಿದ್ದ ಹುಬ್ಬಳ್ಳಿಯ ಸಾವಿರಾರು ಜನ ದನಿಗೂಡಿಸಿದ್ದರು.

ಹುಬ್ಬಳ್ಳಿಯ ಸವಾಯಿ ಗಂಧರ್ವ ಹಾಲ್ ನಲ್ಲಿ ಭಾನುವಾರ ನಡೆದ ಗಂಗೂಬಾಯಿ ಹಾನಗಲ್ ಅವರ ೯೪ ನೇ ಹುಟ್ಟುಹಬ್ಬ ಆಚರಣೆ ಸಮಾರಂಭದಲ್ಲಿ ಹೃದಯಗಳು ಮಾತನಾಡಿದವು. ಯಾವುದೇ ಆಡಂಬರ, ಭಾಷಣಗಳ ಅಬ್ಬರ ಅಲ್ಲಿರಲಿಲ್ಲ. ಪಾಟೇಕರ್ ಮಾತುಗಳು ಸಿನೇಮಾ ಡೈಲಾಗ್‌ಗಳಾಗಿರಲಿಲ್ಲ. 'ಹುಬ್ಬಳ್ಳಿ ನನ್ನ ಬಿಡೂದಿಲ್ಲ, ನಾನು ಹುಬ್ಬಳ್ಳಿ ಬಿಡೂದಿಲ್ಲ'. ನೀವೆಲ್ಲ ಬಂದು ಇಷ್ಟು ದೊಡ್ಡ ಸಮಾರಂಭ ಮಾಡ್ತೀರಂತ ಅನ್ಕೊಂಡಿರಲಿಲ್ಲ. ನನಗೆ ಆನಂದ ಆಗೇದ ಎಂದು ಗಂಗೂಬಾಯಿ ಹೇಳಿದಾಗ, ಪ್ರತಿಯೊಬ್ಬರೂ ಚಪ್ಪಾಳೆ ತಟ್ಟಿ ಹುಟ್ಟುಹಬ್ಬದ ಶುಭ ಹಾರೈಸಿದರು.

ಇದೊಂದು ಸಾಮಾನ್ಯ ಹುಟ್ಟುಹಬ್ಬ ಆಗಿರಲಿಲ್ಲ. ಗಂಗೂಬಾಯಿಯವರು ಗಾನಲೋಕದಲ್ಲಿ ವಿಹರಿಸತೊಡಗಿ ೭೫ ವರ್ಷಗಳಾಗಿದ್ದವು. ಸಂಗೀತ ಕ್ಷೇತ್ರದಲ್ಲಿ ಅಮೃತ ಮಹೋತ್ಸವ ಆಚರಿಸಿದ ಗಾಯಕಿ ಈ ದೇಶದಲ್ಲಿ ಮತ್ತೊಬ್ಬರಿಲ್ಲ. 'ಸಂಗೀತದ ತೊಟ್ಟಿಲನ್ನು ತೂಗುವ ಕೈಗಳು ಇದ್ದೇ ಇರುತ್ತವೆ' ಎಂದು ಪದೇಪದೇ ಹೇಳುವ ಗಂಗೂಬಾಯಿ ಅವರ ಸಾಧನೆ, ನಮ್ರತೆಯೆದುರು ಎಲ್ಲರೂ ತಲೆಬಾಗಿದರು.

ಗಂಗೂಬಾಯಿ ಕನ್ನಡದಲ್ಲೇ ಮಾತನಾಡಿದರು. 'ನೀ ಏನೂ ತಿಳ್ಕೋಬೇಡ. ವ್ಯವಹಾರಕ್ಕಷ್ಟೇ ಮರಾಠಿ ಕಲಿತೆ. ನಾನು ಕನ್ನಡದಾಗ ಮಾತಾಡ್ತೀನಿ' ಎಂದು ಅವರು ನಾನಾ ಪಾಟೇಕರ್‌ಗೆ ಹೇಳಿದಾಗ,'ಆಯೀ, ನೀ ಹೇಳಿದ್ದು ನನ್ನ ಹೃದಯಕ್ಕೆ ಅರ್ಥ ಆಗುತ್ತದೆ' ಎಂದು ಮಾತುಗಾರ ಪಾಟೇಕರ್ ಕೈಮಾಡಿ ತೋರಿಸಿದರು. "ನನಗಿವತ್ತು ಏನು ಮಾತಾಡ್ಬೇಕಂತ ತಿಳಿದ್ಹಾಂಗ ಆಗೇದ. ನನ್ನ ಹುಟ್ಟಿದಹಬ್ಬ ಇಷ್ಟೊಂದು ದೊಡ್ಡ ರೀತಿಯಲ್ಲಿ ಮಾಡ್ತಾರಂತ ನನಗನಿಸಿರಲಿಲ್ಲ. ಧಾರವಾಡದಲ್ಲಿ ಹುಟ್ಟಿದೆ, ಹುಬ್ಬಳ್ಳಿಯಲ್ಲಿ ಬೆಳೆದೆ ಹುಬ್ಬಳ್ಳಿ ನನಗೆ ಹೆಸರು ತಂದುಕೊಟ್ಟಿತು. ನಿಮ್ಮೆಲ್ಲರ ಪ್ರೀತಿಯೇ ನನ್ನ ಬದುಕಿಗೆ ಆಸರೆ' ಎಂದು ಗಂಗೂಬಾಯಿ ಆನಂದಬಾಷ್ಪ ಸುರಿಸುತ್ತ ಹೇಳಿದರು.

ಗಂಗೂಬಾಯಿಗೆ ಅವರ ಮನೆ 'ಗಂಗಾ ಲಹರಿ'ಯಲ್ಲಿ ಪೇಢೆ ತಿನ್ನಿಸಿ, ತಮ್ಮ ಕಾರಿನಲ್ಲೇ ಸವಾಯಿ ಗಂಧರ್ವ ಹಾಲ್‌ಗೆ ಕರೆದುಕೊಂಡು ಬಂದಿದ್ದ ಪಾಟೇಕರ್, 'ತಾಯಿ'ಯ ಕೈ ಹಿಡಿದುಕೊಂಡು ವೇದಿಕೆ ಹತ್ತಿಸಿದರು. ಅವರು ಭಾಷಣ ಮಾಡಲಿಲ್ಲ. ಯಾರೋ ಒಬ್ಬರು ಮರಾಠಿಯಲ್ಲಿ ಮಾತನಾಡಿ ಎಂದು ಕೂಗಿದ್ದನ್ನು ಲೆಕ್ಕಿಸದೇ, ಹಿಂದಿಯಲ್ಲಿ ಮನಮುಟ್ಟುವ ಸಂಗೀತದಂತೆ ಮಾತಿನ ಸುಧೆ ಹರಿಸಿದರು. 'ಅವರಿಗೆ ಒಳ್ಳೆಯದಾಗಲಿ' ಎಂದು ಕನ್ನಡದಲ್ಲೇ ಆರಂಭಿಸಿದರು. 'ಈ ತಾಯಿ ನೋಡಲು ಗೇಣುದ್ದ ಇದ್ದಾರೆ. ಆದರೆ ಈ ತಾಯಿಯ ಎತ್ತರಕ್ಕೆ ನಾನೆಂದೂ ಏರಲು ಸಾಧ್ಯವಿಲ್ಲ. ನಾನಿಲ್ಲಿ ಇವರ ಕಾಲು ಮುಟ್ಟಿ ಹೋಗಲು ಬಂದಿದ್ದೇನೆ. ತಾಯಿ, ನಿನಗೆ ನೂರು ತುಂಬಿದಾಗ ನನಗೂ ೬೧ ತುಂಬುತ್ತದೆ. ನಿನ್ನೊಂದಿಗೆ ನನ್ನ ಸತ್ಕಾರವೂ ನಡೆಯಬೇಕು' ಎಂದು ಅವರು ಗಂಗೂಬಾಯಿಗೆ

ಕೈಮುಗಿಯುತ್ತ ಹೇಳಿದರು.

"ನಾನು ಜೆಜೆ ಕಲಾಶಾಲೆಯಲ್ಲಿ ಓದುತ್ತಿದ್ದಾಗ, ಗಂಗೂಬಾಯಿ ಅವರ ಕಾರ್ಯಕ್ರಮ ಇತ್ತು. ನಾವೆಲ್ಲ ನಾಲ್ಕೈದು ಪುಂಡ ಹುಡುಗರು, ಗಲಾಟೆ ಮಾಡಿ ಹಾಡು ನಿಲ್ಲಿಸುವ ಯೋಚನೆಯಲ್ಲಿದ್ದೆವು. ಐದು ನಿಮಿಷ ಆಯಿತು. ಇನ್ನೂ ಐದು ನಿಮಿಷ ಆಗಲಿ, ನೋಡೋಣ ಎಂದೆ. ಹತ್ತು ನಿಮಿಷ ಆಯಿತು, ಒಂದು ಗಂಟೆ ಆಯಿತು. ನಾವು ಹಾಡು ಕೇಳ್ತಾನೆ ಇದ್ದೆವು. ಅಂದಿನಿಂದ ಈ ತಾಯಿಯ ಮಗನಾದೆ. ನಾನು ತಾನಸೇನನಲ್ಲ, ಕಾನಸೇನ. (ಅಂದರೆ, ನಾನು ಹಾಡುವವನಲ್ಲ, ಕೇಳಗ). ಏಳು ಸಲ ಇವರ ಕಾರ್ಯಕ್ರಮದಲ್ಲಿ ಹಾಡು ಕೇಳಿದ್ದೇನೆ. ನನ್ನ ಈ ಹಮಾಲನಂಥ ಮುಖದಲ್ಲಿ ಏನಿದೆ? ಈ ತಾಯಿಯ ಸ್ಪರ್ಶ, ಬಾಬಾ ಆಮ್ಟೆ ಅವರಂಥ ಮಹಾನ್ ವ್ಯಕ್ತಿಗಳ ಸ್ಪರ್ಶ ನನ್ನನ್ನು ಪಾವನಗೊಳಿಸುತ್ತದೆ. ಅದಕ್ಕಾಗಿಯೇ ಇಲ್ಲಿಗೆ ಬಂದೆ. ಗಂಗಾಲಹರಿಯಲ್ಲಿರುವ ಸಂಗೀತ ವಸ್ತು ಸಂಗ್ರಹಾಲಯ ಅದ್ಭುತ. ಎಲ್ಲರೂ ನೋಡಬೇಕು. ಜಾವೆದ್‌ಅಖ್ತರ್ ಬರೆದ ಹಾಡು ನೆನಪಾಗುತ್ತದೆ. ಮಾಧುರಿಗಾಗಿ ನಾನು ಚಿತ್ರದಲ್ಲಿ ಹಾಡಿದ್ದೆ. ನನ್ನ ತಾಯಿಗಾಗಿ ಅದನ್ನು ಇಲ್ಲಿ ಹೇಳುತ್ತೇನೆ. ನೀನು ನನಗೇನಾಗಬೇಕೆಂದು ನಾನು ಹೇಗೆ ಹೇಳಲಿ, ನೀನು ನನ್ನ ಜೀವ" ಎಂದು ಅವರು ಮಾತು ಮುಗಿಸಿದಾಗ ಒಂದು ಕ್ಷಣ ಮೌನ ಆವರಿಸಿತು. ನಂತರ ಚಪ್ಪಾಳೆಯ ಸುರಿಮಳೆಯಾಯಿತು.

"ನನಗೆ ಶಾಸ್ತ್ರೀಯ ಸಂಗೀತ ಗೊತ್ತಿಲ್ಲ, ಆದರೆ ಅದರ ಮಹತ್ವ ಗೊತ್ತು' ಎಂದು ಹೇಳಿದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕಮಿಷನರ್ ಮಣಿವಣ್ಣನ್, "ಗಂಗೂ ಬಾಯಿ ಅವರ ಸಂಗೀತ ವಸ್ತು ಸಂಗ್ರಹಾಲಯದ ಚಿತ್ರಿಕರಣ ಮಾಡಿ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಹಾಕಲಾಗುವುದು. ಅವರ ಸಾಧನೆಯನ್ನು ಇಡೀ ಜಗತ್ತಿಗೆ ಪರಿಚಯಿಸಲಾಗುವುದು" ಎಂದು ಹೇಳಿದರು.

"ಗಂಗೂಬಾಯಿ ಅವರು ಹಾಡಿದ್ದು ನಮ್ಮ ಸಂತೋಷಕ್ಕಾಗಿ. ಈ ಹಿರಿಯ ಚೇತನವನ್ನು, ಅವರ ಸಂಗೀತವನ್ನು, ಸಾಂಸ್ಕೃತಿಕ ಸಂಪತ್ತನ್ನು ಕಾಪಾಡುವುದು ನಮ್ಮ ಕರ್ತವ್ಯ' ಎಂದು ಹೇಳಿದ ಡಿಸಿಪಿ ರವಿಕಾಂತೇಗೌಡ, ತಾವು ಬರೆದ ಚುಟುಕು ಕವನವನ್ನು ಓದಿದರು. 'ಗಂಗೂಬಾಯಿ ಅವರ ಶರೀರಕ್ಕೆ ಮುಪ್ಪು ಬಂದಿದೆಯೇ ಹೊರತು, ಅವರ ಸಂಗೀತಕ್ಕಲ್ಲ. ಹುಬ್ಬಳ್ಳಿಯ ಆಧ್ಯಾತ್ಮ ಕ್ಷೇತ್ರದಲ್ಲಿ ಸಿದ್ಧಾರೂಢರಿದ್ದರೆ, ಸಂಗೀತಕ್ಷೇತ್ರದಲ್ಲಿ ಗಂಗೂಬಾಯಿ ಇದ್ದಾರೆ. ಅವರ ೧೦೦ ನೇ ಹುಟ್ಟುಹಬ್ಬ, ಅವರ ಗುರುಗಳಾಗಿದ್ದ ಸವಾಯಿ ಗಂಧರ್ವರ ಹಾಲ್‌ನಲ್ಲೇ ನಡೆಯಲಿ' ಎಂದು ಶಾಂಡಿಲ್ಯಾಶ್ರಮದ ಚಂದ್ರಶೇಖರ ಸ್ವಾಮೀಜಿ ಆಶೀರ್ವದಿಸಿದರು.

* * *

ದಲಿತ ಸಮಸ್ಯೆ: ಅಂಬೇಡ್ಕರ್ ಮತ್ತು ಗಾಂಧೀಯವರ ಅಭಿಪ್ರಾಯಗಳು

–ಸತ್ಯವ್ರತ

ಭಾರತೀಯ ಸಮಾಜ ಒಂದುಗೂಡಿರಬೇಕು ಮತ್ತು ಒಡೆಯದಿರಬೇಕು. ಇದೇ ನಮ್ಮ ಮುಂದೆ ಇರಿಸಿಕೊಳ್ಳಬೇಕಾದ ಸರ್ವೋಚ್ಚದರ್ಜೆಯ ಲೌಕಿಕ ಆದರ್ಶ. ಇದೇ ನಮ್ಮ ಕರ್ತವ್ಯ ಮತ್ತು ಅಗತ್ಯ. ಹಾಗಾದರೆ ಸಮಾಜದಲ್ಲಿ ಏಕರಸತೆ ಮತ್ತು ಏಕ ಸೂತ್ರತೆಯ ತತ್ವಗಳು ಹೆಚ್ಚು ಹೆಚ್ಚಾಗಿ ಮೊಳೆತು ದೃಢವಾಗಬೇಕು. ಇದನ್ನು ಬಯಸುವವರೆಲ್ಲ ಗಾಂಧಿ–ಅಂಬೇಡ್ಕರರ ವಿಚಾರಗಳಲ್ಲಿ ಹೆಚ್ಚು ಹೆಚ್ಚು ಸಾಮ್ಯತೆಯನ್ನೂ ಕಂಡಾರು. ಹಿಂದೂ ಸಾಮಾಜಿಕ ಸಂಘಟನೆಗೆ ಸಂಬಂಧಿಸಿದ ಅವರ ವಿಚಾರಗಳಲ್ಲಿ ಸಾಮ್ಯತೆಯನ್ನೇ ಅರಸಿಯಾರು. ಇಂಥ ಜನ ಇಬ್ಬರಲ್ಲಿ ಇದ್ದಿರಬಹುದಾದ ವೈಚಾರಿಕ ಭೇದ ಎಷ್ಟು ಅಲ್ಪವಾಗಿತ್ತು ಮತ್ತು ಸಾಮ್ಯ ಎಷ್ಟು ಮೂಲಭೂತವೂ ಮತ್ತು ಎಷ್ಟುಗಾಢವೂ ಆಗಿತ್ತೆಂಬುದನ್ನು ಅರಿಯದೇ ಹೋಗುವುದಿಲ್ಲ. ತಮ್ಮಲ್ಲಿ ಎಷ್ಟು ಮತೈಕ್ಯ ಇದೆಯೋ ಅಷ್ಟು ಅಂಶಗಳನ್ನು ಕಾರ್ಯರೂಪಕ್ಕಿಳಿಸಲು ಜೊತೆಗೂಡಿ ಮುಂದೆ ಸಾಗಬೇಕೆಂದೂ, ಮತಭೇದವಿರುವ ಅಂಶಗಳನ್ನು ಚರ್ಚೆಗೆ ಪುನಃ ಪುನಃ ವಿಚಾರ ವಿನಿಮಯಕ್ಕೆಂದು ಪ್ರತ್ಯೇಕ ಇಟ್ಟುಕೊಳ್ಳಬಹುದೆಂದು ವಿವೇಕಯುಕ್ತ ನಿರ್ಣಯಕ್ಕೆ ಅವರಿಬ್ಬರೂ ಬರಬಲ್ಲವರಾಗಿದ್ದರು ಎಂದು ಈ ವಿಚಾರಪರರು ಒಪ್ಪುತ್ತಾರೆ. ಈ ಗುಂಪಿಗೆ ಸೇರದ ಬೇರೊಂದು ಗುಂಪಿನ ಅನುಯಾಯಿಗಳಿದ್ದಾರಲ್ಲ ಅವರದೇ ದೊಡ್ಡ ಸಮಸ್ಯೆ.

ಮಹಾತ್ಮಗಾಂಧಿ ಮಾನವನಿರ್ಮಿತ ಭೇದ–ಪ್ರಭೇದಗಳಲ್ಲಿ ಅಡಗಿರುವ ಅಪಾಯಗಳತ್ತ ನಮ್ಮನ್ನು ಎಚ್ಚರಿಸುತ್ತಲೇ ಇದ್ದರು. ನಮ್ಮ ಸಮಾಜದಲ್ಲಿ ಬೇರು ಬಿಟ್ಟಿರುವ ನೈತಿಕ ದೌರ್ಬಲ್ಯಗಳ ಕಡೆ ಬೆರಳೆತ್ತಿ ತೋರಿಸುತ್ತಿದ್ದರು. ಇವೆಲ್ಲ ಉದ್ದೇಶ್ಯ ಸಾಧಿಸುವುದು ತಮ್ಮ ಕರ್ತವ್ಯವೆಂದು ತಿಳಿದಿರುವವರಿಗೆ ಮತ್ತು ಆ ನಿಟ್ಟಿನಲ್ಲಿ ಯೋಚಿಸುವ ವಿಚಾರಪರರಿಗೆ ಗಾಂಧೀ ಮತ್ತು ಅಂಬೇಡ್ಕರ್‌ರಲ್ಲಿ ಹೆಚ್ಚೇನೂ ಮತಭೇದ ಕಾಣಿಸದು. ಕಂಡುಬರುವ ಅಷ್ಟಿಷ್ಟು ಮತಭೇದವೂ ಅವರಿಬ್ಬರೂ ಕೂಡಿ ಮಾತುಕತೆ ಮಾಡಿದ್ದಿದ್ದರೆ ಬಗೆಹರಿಯುವಂಥವೇ ಇದ್ದವು. ಅವು ಅಂಥ ಅಪರಿಹಾರ್ಯವೇನಲ್ಲವೆಂದೇ ತಿಳಿದಿದ್ದರು ಎಂಬ ಅಂಶವನ್ನೂ ಅವರ ಅನುಯಾಯಿಗಳೂ, ಅವರ ನಂತರದ ಪೀಳಿಗೆಯವರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ವಾಸ್ತವವಾಗಿ ಗಾಂಧಿ ಮೇಲೆ ವಿವರಿಸಿದಂತೆ ನಡೆದುಕೊಂಡರು. ಅದೇ ಸಲಹೆಯನ್ನೂ ಅಂಬೇಡ್ಕರರ ಮುಂದಿಟ್ಟು ಮುಖ್ಯ ಅಭಿಯಾನಕ್ಕೆ ಜೊತೆಗೂಡಿ ದುಡಿಯೋಣವೆಂದು ಅವರನ್ನು ಆಹ್ವಾನಿಸಿದರು. ಮುಂದೆ ಇದು ಸ್ಪಷ್ಟವಾಗುತ್ತದೆ.

ಗಾಂಧಿ–ಅಂಬೇಡ್ಕರರಲ್ಲಿ ಮತಭೇದವಿದ್ದುದು ಕಿರಿದಾದ, ಸೂಕ್ಷ್ಮ ವೈಚಾರಿಕ ಅರ್ಥಾತ್ ಮಾರ್ಗಾವಲಂಬನೆಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ಮಾತ್ರ ಉಳಿದೆಲ್ಲ

ವಿಶಾಲ ವೈಚಾರಿಕ ಕ್ಷೇತ್ರದಲ್ಲಿ ಇದ್ದುದು ಒಮ್ಮತ. ಅದನ್ನು ಅಂಬೇಡ್ಕರ್‌ರೇ ಹೇಳಿದ್ದಾರೆ. ಅವರ ಅತಿ ಮುಖ್ಯ ಭಾಷಣಗಳಲ್ಲೊಂದರ ಈ ಕೆಳಗಿನ ಅಂಶವೇ ಇದಕ್ಕೆ ತಕ್ಕ ನಿದರ್ಶನ.

Dr. Ambedkar made in interesting speech at the Bombay conference on Sunday September 25 which ratified the Poona pact or yarwada Agreement. praising Gandhiji's conciliatory attitude, Ambedkar said "I must confess that I was surprised, immensely surprised When I met him, that there was so much in common between him and me. Infact whenever any disputes were carried to him-and Sir, Tejbahadur has told you that the disputes that were carried to him were of a very crucial character- I was astounded to see that the man, who held such divergent views from mine at the Round Table Conference, come immediately to my rescue and not to the rescue of the other side. I am very grateful to the Mahatmaji for having extricated me from what might have been a very difficult situation.

My only regret is ; Dr. Ambedkar stated in that same speech, 'Why did not Mahatmaji take this attitude at the Round Table Conference? if he had shown the same consideration to my point of veiw then, it would not have been necessary for him to go through this ordeal'. However, he added generously, these are things of the past. I am glad that I am here now to support this resolution of ratification. ('The life of Mahatma Gandhi' by Louis Fischer : chapter 14 : page 313)

ಈ ಎರಡು ಪ್ಯಾರಾಗಳಲ್ಲಿ ಅಂಬೇಡ್ಕರರ ಭಾಷಣದ ಮುಖ್ಯಾಂಶಗಳನ್ನು ಉದಾಹರಿಸಿದ ಗ್ರಂಥಕರ್ತ ಲೂಯಿ ಫಿಷರ್ ತನ್ನದೇ ದೃಷ್ಟಿಕೋನದಿಂದ ವಿವರಿಸಿದ್ದಲ್ಲದೇ ತನ್ನ ಚಿತ್ತದ ಮೇಲಾದ ಪ್ರಭಾವವನ್ನೂ ದಾಖಲಿಸಿದ್ದಾರೆ :

This was not only a polite tribute at a moment of relaxation, after hectic days but also a correct description of Gandhi's attitude. Gandhi did favour the Harijan Position over the Hindu Position. Gandhi had gone so far in his desire to meet the Harijan's 100 percent of the way, that he revered himself on the key issue of reserved seats(ಅದೇ ಗ್ರಂಥ, ಅದೇ ಪುಟ)

ಹೀಗೆ ಇತ್ತ ಗಾಂಧಿ ಬದಲಾಗಿ ಸ್ವಲ್ಪ ಬಿಟ್ಟುಕೊಟ್ಟರೆ, ಅತ್ತ ಅಂಬೇಡ್ಕರರೂ ಬದಲಾದರು, ಅವರೂ ಸ್ವಲ್ಪ ಬಿಟ್ಟುಕೊಟ್ಟರು, ಕೆಲವು ವಿಷಯಗಳಲ್ಲಿ ತಮ್ಮ ಆಗ್ರಹ

ತೊರೆದರು. ಲೂಯಿ ಫಿಷರ್ ಇದೇ ಅಧ್ಯಾಯದ ಕೊಂಚ ಪ್ರಾರಂಭದಲ್ಲಿ ಅಂಬೇಡ್ಕರರ ವ್ಯಕ್ತಿ ಚಿತ್ರ ಕೊಡುತ್ತಾ ಹೀಗೆ ಬರೆದರು "Age long Hindu cruelty to his un happy brothren filled him with anger, spite, and vindictivenss. If any body in India could have contempalated with equanimity the death of Gandhi. Ambedkar was the man. He called the fast a ' Political stunt'. All the conference he faced the great Hindu minds, and he must have derived sweet pleasure watching them court him in order to save their beloved Mahatma."

ಇಂಥ ವ್ಯಕ್ತಿ ಅಂಬೇಡ್ಕರ್ ಗಾಂಧೀಯವರ ವಿಷಯಕ್ಕೆ ಬಹಳಷ್ಟು ಬದಲಾಗಬೇಕಾಗಿ ಬಂತು. ಮೇಲಿನ ಉದಾಹರಣೆಯಲ್ಲಿ ಹೇಳಿರುವಂತೆ ಅಂಬೇಡ್ಕರ್ ತಮ್ಮನ್ನು ಅತಿಕಷ್ಟದಾಯಕ ಸ್ಥಿತಿಯಿಂದ ಪಾರುಮಾಡಿದ್ದಕ್ಕಾಗಿ ಗಾಂಧೀಯವರನ್ನು ಮನಸಾರೆ ವಂದಿಸಿದರು.ಹಾಗೆಯೇ ಇನ್ನೊಂದು ಮುಖ್ಯಾಂಶವನ್ನೂ ಆ ಹೇಳಿಕೆಯಲ್ಲಿ ಗಮನಿಸದೆ ಇರುವಂತಿಲ್ಲ. ಗಾಂಧೀಯವರಿಗೂ ತಮಗೂ ಅಷ್ಟೊಂದು ಸಾಮ್ಯವಿತ್ತೆಂದು ಕಂಡು ತಮಗೆ ಅತೀವ ಆನಂದವಾಯಿತೆಂದು ತಾವು ಒಪ್ಪಿಕೊಳ್ಳುವುದಾಗಿ ಅಂಬೇಡ್ಕರ್ ಹೇಳಿದರು. ಈ ಎರಡೂ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾದ್ದೇ.

ಒಪ್ಪಂದದಲ್ಲಿ ಪರ್ಯವಸಾನವಾಗುವ ಎಲ್ಲ ಸಫಲ ಸಂಧಾನಗಳಲ್ಲಿ ಎದುರು-ಬದರು ಪಕ್ಷಗಳು ಮೂಲನಿಲುವುಗಳಲ್ಲಿ ಬದಲಾವಣೆ, ಹೊಂದಾಣಿಕೆ, ಸೆಡವಿನ ಧೋರಣೆಯಲ್ಲಿ ಸಡಿಲಿಕೆ ಇವು ಅತ್ಯಾವಶ್ಯಕವಾಗುತ್ತವೆ. ಗಾಂಧೀ ಅಂಬೇಡ್ಕರ್ ಮತ್ತು ಹಿಂದೂ ಸವರ್ಣೀಯರಲ್ಲಿ ನಡೆದ ಸಫಲ ಸಂಧಾನಗಳಲ್ಲಿ ಈ ಮೂರೂ ಆದುದನ್ನು ಕಾಣಬಹುದು. ಮೀಸಲಾತಿ ತತ್ವದ ವಿರೋಧಿಗಾಂಧೀ, ಸರ್ಕಾರಿ ನೌಕರಿಗಳಲ್ಲಿ ಮುಸ್ಲಿಂ ಶಿಕ್ಷಿತಯುವಕರಿಗೆ ಮೀಸಲಾತಿ ತತ್ವದ ಅನ್ವಯವನ್ನು ವಿರೋಧಿಸಿದ್ದ(೧೯೨೪) ಗಾಂಧಿ ತಮ್ಮ ಈ ನಿಲುವಿನಲ್ಲಿ ಬದಲಾವಣೆ ಮಾಡಿಕೊಂಡು ಚುನಾವಣೆಗಳಲ್ಲಿ ಹರಿಜನರಿಗೆ ಮೀಸಲು ಕ್ಷೇತ್ರಗಳಿಗಾಗಿ ಮೀಸಲಾತಿ ನೀತಿಯ ಅನ್ವಯಕ್ಕೊಪ್ಪಿದರು. ಅದೇ ರೀತಿ ಅಂಬೇಡ್ಕರ್ ತಮ್ಮ ಸೆಡವಿನ ಧೋರಣೆಯನ್ನು ಬಿಟ್ಟುಕೊಟ್ಟರು. ಮೀಸಲಾತಿಯ ಅವಧಿ ಎಷ್ಟುಕಾಲವಿರಬೇಕೆನ್ನುವ ವಿಷಯದಲ್ಲಿ ಅಂಬೇಡ್ಕರ್ ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಿಕೊಂಡರು. ಇದರಲ್ಲಿ ಗಾಂಧೀ ತಮ್ಮ ಆಗ್ರಹಬಿಟ್ಟು ಹಿಂದೆ ಸರಿದರು. ರಾಜಾಜಿಯ ರಾಜಿ ಸೂತ್ರಕ್ಕೆ ಇಬ್ಬರೂ ತಲೆಬಾಗಿದರು. ಇಷ್ಟೆಲ್ಲ ಹೊಂದಾಣಿಕೆ, ಹಿಂದೆ ಸರಿಯುವಿಕೆಯಾಗಿ ಸಂಧಾನ ಸಫಲವಾಯಿತು ಮತ್ತು ಗಾಂಧಿಯವರ ಉಪವಾಸ ಮುಗಿಯಿತು.

ಗಾಂಧೀ-ಅಂಬೇಡ್ಕರ್ ನಡುವೆ ಮತಭೇದವಿದ್ದುದರಲ್ಲಿ ಆಶ್ಚರ್ಯವೂ ಇಲ್ಲ ಅದು ಖೇದದ ಸಂಗತಿಯೂ ಅಲ್ಲ. ಒಬ್ಬರು ಇನ್ನೊಬ್ಬರ ರಬ್ಬರ್ ಮುದ್ರೆ ಮೋಹರೇನಲ್ಲವಲ್ಲ? ಹಾಗಾಗಲೆಂದು ಯಾರೂ ನೀರಿಕ್ಷಿಸಲಾರರು. ಅವರವರ ವೈಶಿಷ್ಟ್ಯವಿರುವುದೇ ಅವರ ವಿಶಿಷ್ಟವಿಚಾರಗಳಲ್ಲಿ ಮತ್ತು ಅನುಭವಗಳಲ್ಲಿ. ತಮ್ಮ ವೈಶಿಷ್ಟ್ಯಗಳನ್ನು ಬಿಡುವುದೆಂದರೆ ಗಾಂಧಿ ಗಾಂಧೀತನ, ಅಂಬೇಡ್ಕರ್ ಅಂಬೇಡ್ಕರ್‌ತನ ಬಿಟ್ಟ ಹಾಗೆ. ಅದಕ್ಕೊಂದು ಇತಿ-ಮಿತಿ ಉಂಟು. ಒಂದು ಮಹಾನ್ ಉದ್ದೇಶ ಸಾಧನೆಗಾಗಿ ಗಾಂಧೀ ಗಾಂಧೀತನವನ್ನು ತೊರೆದಾರು. ಅವರು ಶೂನ್ಯವತ್ ಆಗಬಹುದು. ಆದರೆ

ಅಂಬೇಡ್ಕರ್ ವಿಷಯದಲ್ಲಿ ಈ ಮಾತು ಹೇಳುವುದು ಸ್ವಲ್ಪ ಕಷ್ಟವೇ. ಒಂದು ಸಂಶಯ ಆಗಿಂದಾಗ್ಗೆ ತಲೆ ಎತ್ತುತ್ತಿರುತ್ತದೆ. ಅದನ್ನು ಅಂಬೇಡ್ಕರ್‌ರೂ ತಮ್ಮ ಮುಂಬಯಿ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಗಾಂಧೀ ದುಂಡು ಮೇಜುಪರಿಷತ್‌ನಲ್ಲಿ ತಳೆದ ನಿಲುವಿಗೂ, ಅವರು ತಮ್ಮ ಉಪವಾಸ ಸಂದರ್ಭದಲ್ಲಿ ಅನುಸರಿಸಿದ ಧೋರಣೆಗೂ ವ್ಯತ್ಯಾಸವಾಯಿತು. ಇಲ್ಲಿ ತೋರಿದ ಹೊಂದಾಣಿಕೆಯ ಮನೋಭಾವವನ್ನೇ ಪರಿಷತ್ನಲ್ಲೇಕೆ ತೋರಲಿಲ್ಲ? ಇದು ಅನೇಕರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆ. ಉತ್ತರವಿಷ್ಟೆ. ಇವೆರಡರ ಹಿನ್ನೆಲೆ ಮತ್ತು ಸಂದರ್ಭ ಬೇರೆಬೇರೆ. ಕರಾಚಿಯ ಕಾಂಗ್ರೆಸ್ ಅಧಿವೇಶನ ಗಾಂಧೀಯವರಿಗೆ ಕೊಟ್ಟ ಆದೇಶ ಮತ್ತು ವೈಚಾರಿಕ ಪರಧಿಯೊಳಗೆ ಮಾತ್ರ ಅವರು ದುಂಡು ಮೇಜಿನ ಪರಿಷತ್ತಿನಲ್ಲಿ ಕಾರ್ಯ ಮಾಡಬಹುದಾಗಿತ್ತು, ಮಾತುಕತೆನಡೆಸಬಹುದಾಗಿತ್ತು. ಅವರು ಅದನ್ನು ಅತಿಕ್ರಮಿಸುವಂತಿರಲಿಲ್ಲ. ಅವರೊಬ್ಬರೇ ಅದರೊಳಗೆ ಬದಲಾವಣೆ ತರುವಷ್ಟು ಸ್ವತಂತ್ರರೂ ಆಗಿರಲಿಲ್ಲ. ಅವರು ಕಾಂಗ್ರೆಸ್ ಪ್ರತಿನಿಧಿಯುಷ್ಟೆ. ಆ ಇತಿ–ಮಿತಿಯುಲ್ಲಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಅವರು ಪರಿಷತ್ತಿನಲ್ಲಿ ತಳೆದ ನಿಲುವು ಸ್ವಲ್ಪ ಗಡುಸಾಗಿತ್ತು. ಆದರೆ ಅವರ ಉಪವಾಸ ಕಾಲದ ಸಂದರ್ಭ ತೀರ ಭಿನ್ನ. ಅವರು ಸ್ವತಂತ್ರರು, ಆತ್ಮದ ಒಳದನಿಗೆ ಓಗೊಟ್ಟು ಕೈಗೊಂಡ ಆತ್ಮಕ್ಲೇಶದ ಪರಮೋಚ್ಚ ಸಂಕಲ್ಪ ಮತ್ತು ದೇಶದ ಜನತೆಯನ್ನು, ಹಿಂದೂ ಸಂಪ್ರದಾಯಸ್ಥರನ್ನು ತನ್ನೊಡನೆ ಪರಿವರ್ತನೆಯ ದಿಶೆಗೆ ಒಯ್ಯಬೇಕಾದ ಗುರುತರ ಕಾರ್ಯಜವಾಬ್ದಾರಿಯನ್ನು ಹೊತ್ತವರು. ಆದುದರಿಂದ ಮಾತುಕತೆಗೆ, ನಿರ್ಣಯಕ್ಕೆ ಬರಲು ಈ ಸಮಯದಲ್ಲಿದ್ದಷ್ಟು ಸ್ವಾತಂತ್ರ್ಯ ದುಂಡುಮೇಜು ಪರಿಷತ್ತಿನಲ್ಲಿರಲಿಲ್ಲ. ಒಂದು ವೇಳೆ ಪರಿಷತ್ತಿನಲ್ಲಿ ಸ್ವಾತಂತ್ರ್ಯವಹಿಸಿ ಇಲ್ಲಿ ನಡೆದಂತೆ ಅದರಲ್ಲಿಯೂ ನಡೆದಿದ್ದಿರಬಹುದಾಗಿತ್ತು ಎಂದು ಯೋಚಿಸಬಹುದು. ಆದರೆ ಅವರ ಆಗಿನ ಉದಾರನಿಲುವಿಗೆ ಸಂಪೂರ್ಣಜನತೆಯ ಬೆಂಬಲ ಮತ್ತು ಸಮ್ಮತಿದೊರೆಕಿಸುವುದು ಅಸಾಧ್ಯವಾಗುತ್ತಿತ್ತು. ಗಾಂಧೀಯವರ ಆಮರಣಾಂತ ಉಪವಾಸ ಹಿಂದೂ ಹೃದಯಗಳಲ್ಲಿ ತಂದ ಚಮತ್ಕಾರಿಕ ಪರಿವರ್ತನೆ ಆಗೆಲ್ಲಿ ಸಾಧ್ಯವಾಗುತ್ತಿತ್ತು? ಗಾಂಧಿ ನಿಲುವನ್ನು ಕುರಿತು ಟೀಕಾಪ್ರಹಾರ ಮಾಡುವವರು ಈ ಮಾರ್ಮಿಕ ಸಂಗತಿಯನ್ನು ಗಮನಿಸಬೇಕು; ಎರಡೂ ಸಂದರ್ಭಗಳಲ್ಲಿರುವ ಗಹನ ಭೇದವನ್ನೂ ಅರಿಯಬೇಕು.

ಗಾಂಧಿ–ಅಂಬೇಡ್ಕರ್‌ರ ನಡುವಣ ಮತಭೇದ ಪ್ರಶ್ನೆಗೆ ಬಂದರೆ ಅಲ್ಲಿ ಗಾಂಧೀ ಸೂಚಿಸದ ಕಾರ್ಯಕಾರಿ ಸೂತ್ರ ಬಹು ಪರಿಣಾಮಕಾರಿಯಾಗಿತ್ತು. ಮತಭೇದ ಅಂಶಗಳನ್ನು ಚರ್ಚೆಗಿರಿಸಿಕೊಳ್ಳೋಣ. ನಿರ್ವಿವಾದದ, ಒಪ್ಪಿಗೆಯಾದ ವಿಷಯಗಳನ್ನೆತ್ತಿಕೊಂಡು ಅವನ್ನು ಜಾರಿಗೆ ತರುವ ಕಾರ್ಯಕ್ಕೆ ಇಳಿಯೋಣ. ಈ ಸೂತ್ರ ಹಿಡಿದು ವಿಭಿನ್ನ ನಿಲುವಿನ ಜನವೆಲ್ಲ ಜೊತೆಗೂಡಿ ಕಾರ್ಯರಂಗಕ್ಕಿಳಿಯಬಹುದಾಗಿತ್ತು. ಆ ಕರೆ ಸ್ವೀಕರಿಸಿ ಅಂಬೇಡ್ಕರ್ ಜೊತೆ ಕಾರ್ಯಾಚರಣೆಗೆ ಮುಂದೆ ಬರಲಿಲ್ಲವೇಕೆ? ಇದಕ್ಕೆ ಸಮಾಧಾನಕರ ಉತ್ತರ ಸಿಕ್ಕದೆ ಹೋಯಿತು. ಸೂತ್ರವಂತೂ 'ಸರ್ವೇಷಾಂ ಅವಿರೋಧೇನ' ದ ರೂಪದ್ದು ಅದನ್ನು ನಡೆಯಗೊಡಲಿಲ್ಲ ಅದೇ ಇಂದಿಗೂ ಸಖೇದಾಶ್ಚರ್ಯದ ವಿಷಯ.

ಮತಭೇದ ಎಷ್ಟು? ಎಲ್ಲಿ?: ಇದನ್ನು ಗಾಂಧೀಯವರಿಂದಲೇ ಕೇಳುವುದು ಒಳಿತು. ತಮ್ಮ ಹರಿಜನ ಪತ್ರಿಕೆಯ ಮೊದಲ ಸಂಚಿಕೆಗೆ ಒಂದು ಸಂದೇಶ ಕಳುಹಿಸುವಂತೆ ಅಂಬೇಡ್ಕರರನ್ನು ಕೇಳಿದ್ದರು. ಅದಕ್ಕುತ್ತರವಾಗಿ ಅಂಬೇಡ್ಕರರು ಬರೆದು ಕಳುಹಿಸಿದ

ಹೇಳಿಕೆಯನ್ನು ಪ್ರಕಟಿಸಿ ಗಾಂಧೀ ಅದರ ಮೇಲೆ ಒಂದು ಟಿಪ್ಪಣಿ ಬರೆದರು. ಅದರಲ್ಲಿ ತಮಗೂ ಅವರಿಗೂ ಇರುವ ಭಿನ್ನಾಭಿಪ್ರಾಯ ಎಲ್ಲೆಲ್ಲಿ ಮತ್ತು ಎಷ್ಟು ಎಂದು ಚರ್ಚಿಸಿದ್ದಾರೆ.

ಅಂಬೇಡ್ಕರ್ ಹಿಂದೂ ಸಾಮಾಜಿಕ ಸಂಘಟನೆಯ ಮೇಲೆ ತಮಗಿರುವ ಭಿನ್ನಾಭಿಪ್ರಾಯವೇನೆಂದು ತಿಳಿದಿರಲಿ ಎಂದು ಬರೆದು, ಅದಕ್ಕೆ ಸಂದೇಶ ಕೊಡುವುದರ ಬದಲು ಅಂಬೇಡ್ಕರ್ ಒಂದು ಹೇಳಿಕೆ ನೀಡಿದರು. "ಬಹಿಷ್ಕೃತರು ಜಾತಿ ಪದ್ಧತಿಯ ಒಂದು ಉಪಉತ್ಪತ್ತಿ, ಜಾತಿ ಇರುವಷ್ಟು ಕಾಲವೂ ಬಹಿಷ್ಕೃತರೂ ಇದ್ದಾರು. ಜಾತಿ ಪದ್ಧತಿ ನಾಶವಾದರೇನೆ ಬಹಿಷ್ಕೃತರ ಉದ್ಧಾರ ಸಾಧ್ಯ. ಮುಂಬರುವ ಹೋರಾಟದಲ್ಲಿ ಹಿಂದೂ ನಂಬಿಕೆಯಲ್ಲಿ ಒಳಹೊಕ್ಕಿರುವ ಈ ಅಸಹ್ಯಕರ, ವಿಷಾಕ್ತ ಸಿದ್ಧಾಂತವನ್ನು ಉಚ್ಚಾಟಿಸುವ ಕ್ರಮವೊಂದೇ ಹಿಂದೂ ಜನರನ್ನು ರಕ್ಷಿಸಬಲ್ಲದು ಮತ್ತು ಅವರ ಉಳಿವನ್ನು ಸುನಿಶ್ಚಿತಗೊಳಿಸೀತು" ಎಂದಿತ್ತು ಆ ಹೇಳಿಕೆ-೭-೨-೩೩ ಇದು ೧೧-೨-೩೩ ರ ಸಂಚಿಕೆಯಲ್ಲಿ ಪ್ರಕಟವಾಯಿತು.

ಗಾಂಧಿ ತಾವು ಬರೆದ ಟಿಪ್ಪಣಿಯಲ್ಲಿ ಅದಕ್ಕೆ ಉತ್ತರ ನೀಡಿದರು. "ಶಿಕ್ಷಿತ ಹಿಂದೂಗಳನೇಕರು ಇದೇ ನಂಬಿಕೆಯನ್ನಿಟ್ಟವರಿದ್ದಾರೆ. ಆದರೆ ನಾನು ಅದನ್ನು ನಂಬಲಾರೆ..... ಮುಖ್ಯವಾಗಿ ಅಸ್ಪೃಶ್ಯತೆ ಎನ್ನುವುದು ಹಿಂದೂ ಸಮಾಜದಲ್ಲಿ ತಲೆದೋರಿ ಅದರಲ್ಲಿ ಬೇರುಬಿಟ್ಟು ನೆಲೆಸಿರುವ, ಅದಕ್ಕೆ ತುಕ್ಕುಹಿಡಿಸುತ್ತಿರುವ ಉಚ್ಚ-ನೀಚ ಭಾವದ ಪರಿಣಾಮ, ಉತ್ಪನ್ನವೇ ಹೊರತು ಅದು ಜಾತಿಪದ್ಧತಿಯಿಂದ ಹುಟ್ಟಿದುದಲ್ಲ, ಜಾತಿ ಎನ್ನುವುವೆಲ್ಲ ವೃತ್ತಿಸಂಘಗಳು. ಅವು ಅಸಂಖ್ಯಾತ, ನಿರಂತರ ಪರಿವರ್ತನ ಶೀಲ. ಅವು ವರ್ಣವ್ಯವಸ್ಥೆಗಾಗಲಿ, ಮತಧರ್ಮಕ್ಕಾಗಲಿ ಏನೂ ಸಂಬಂಧವಿಲ್ಲದವು. ಅವುಗಳಲ್ಲಿ ಅನೇಕ ಅನಪೇಕ್ಷ ಆಚರಣೆ, ಅನುಷ್ಠಾನ ಸೇರಿವೆ. ಹಾಗಾಗಲೂ ಕಾರಣ ಹಿಂದೂಧರ್ಮ ಇಂದು ಜೀವಂತ ಸತ್ವಯುತ ಶಕ್ತಿಯಾಗಿ ಉಳಿದಿಲ್ಲ. ಆದುದರಿಂದ ಅಸ್ಪೃಶ್ಯತೆಯ ಮೇಲೆ ಧಾಳಿಯೆಂದರೆ ಈ ಉಚ್ಚ-ನೀಚ ಭಾವದ ಮೇಲೆ ನಡೆಸಿದ ಧಾಳಿಯೆಂದೇ ಅರ್ಥ. ಅಸ್ಪೃಶ್ಯತೆ ತೊಲಗಿತೆಂದರೆ ವರ್ಣಪದ್ಧತಿಯ ಶುದ್ಧೀಕರಣವಾಗಿ ಅದು ಯಾಥಾರ್ಥ ರೂಪ ಪಡೆಯುವುದು. ಹೀಗಿರುವಾಗ ವರ್ಣವ್ಯವಸ್ಥೆ ನಾಶವಾಗದೆ ಅಸ್ಪೃಶ್ಯತೆ ಕೊನೆಗಾಣದು ಎಂದು ವಾದಿಸುವ ಅಂಬೇಡ್ಕರ್‌ರೂ ಸೇರಿದಂತೆ ವಿಶಿಷ್ಟ ಜನರೊಡನೆ ನಾನು ಭಿನ್ನಾಭಿಪ್ರಾಯ ಇಟ್ಟಿದ್ದೇನೆ. ಅವರು ವರ್ಣ ಮತ್ತು ಜಾತಿಗಳ ಮಧ್ಯೆ ಯಾವ ಭೇದವನ್ನೂ ಮಾಡಿಲ್ಲವೆಂದು ಹೇಳಿ ಗಾಂಧೀ ತಮ್ಮ ಸೂತ್ರವನ್ನಿಟ್ಟರು. ಈ ಸಮಯದಲ್ಲಿ ಈ ವ್ಯವಸ್ಥೆಯಲ್ಲಿ ನಂಬಿಕೆ ಇರುವವರು, ಇಲ್ಲದವರೂ ಕೂಡಿ ಎದುರಿಸಬೇಕಾದುದು ಅಸ್ಪೃಶ್ಯತಾ ನಿವಾರಣೆಯ ಸಮಸ್ಯೆಯನ್ನು ಎಂದೊಪ್ಪಿದ್ದಾರೆ. ಇದು ಎಲ್ಲರೂ ಒಪ್ಪುವ ಸಾಮಾನ್ಯಂಶ ಆದುದರಿಂದ ಡಾ॥ಅಂಬೇಡ್ಕರ್ ಸಹಿತ ಅವರೆಲ್ಲರನ್ನೂ ಈ ಅಭಿಶಾಪದಿಂದ ಮುಕ್ತವಾಗುವ ಅಭಿಯಾನದಲ್ಲಿ ಪಾಲ್ಗೊಳ್ಳಿ ಎಂದು ಆಮಂತ್ರಿಸುತ್ತೇನೆ ಎಂದರು. ಗಾಂಧಿ-ಅಂಬೇಡ್ಕರ್ ಮತಭೇದದ ಮೂಲ ಮಾತುಗಳು ಇವು.

***

ಜನಪದ ನಿಲಯದ ಅಂತರಂಗದಲ್ಲಿ..........೨೯

"ಜೀವನದಲ್ಲಿ ಎಲ್ಲಕ್ಕಿಂತ ಮುಖ್ಯವಾದ ವಿಷಯವೆಂದರೆ, ಎಲ್ಲಾ ವಿಷಯಗಳನ್ನು ಶಾಂತವಾಗಿ ಸ್ವೀಕರಿಸುವುದನ್ನು ಕಲಿಯುವುದಾಗಿದೆ".

–ಮೈಕಲ್ ಫ್ಯಾರಡೆ



೧೯೫೮ ರ ಪ್ರಾರಂಭದಲ್ಲಿ ನಾನು ಗಿರಿಜಾರವರೊಂದಿಗೆ ಕೆಂಪಿಸಿದ್ದನ ಹುಂಡಿಗೆ ಬಂದಿಳಿದೆ. ಕೆಂಪಿಸಿದ್ದನಹುಂಡಿ ನಂಜನಗೂಡು ತಾಲ್ಲೂಕಿನಲ್ಲಿಯ ಒಂದು ಪುಟ್ಟ ಗ್ರಾಮ. ಜನಸಂಖ್ಯೆ ಎರಡರಿಂದ ಮೂರುಸಾವಿರ ಇದ್ದಿರಬಹುದು. ನಂಜನಗೂಡು ತಾಲ್ಲೋಕಿನಲ್ಲಿಯ ಅನೇಕ ಗ್ರಾಮಗಳಿಗೆ ಹಳ್ಳಿ ಎಂಬ ಶಬ್ದದ ಬದಲಾಗಿ ಹುಂಡಿ ಎಂಬ ಶಬ್ದವಿದೆ. ಕೆಂಪಿಸಿದ್ದನ ಹುಂಡಿ ಕಪಿಲ ನದಿಯ ಪಕ್ಕದಲ್ಲಿರುವಂಥದು. ಬೇಸಿಗೆಯಲ್ಲಿ ನದಿಯಲ್ಲಿ ನೀರು ಕಡಿಮೆಯಿದ್ದಾಗ ನಡೆದುಕೊಂಡೆ ಹೊಳೆ ದಾಟಿ ನಂಜನಗೂಡಿಗೆ ಹೋಗಬಹುದಾಗಿತ್ತು. ಮುಖ್ಯ ರಸ್ತೆಯಲ್ಲಿ ಹೋದರೆ ನಂಜನಗೂಡು ಸುಮಾರು ಮೂರು ಮೈಲಿಗಳಷ್ಟಾಗುತ್ತಿತ್ತು. ಮಳೆಗಾಲದಲ್ಲಿ ದೋಣಿಯಲ್ಲಿ ಹೊಳೆಯನ್ನು ದಾಟಬೇಕಾಗುತ್ತಿತ್ತು. ಈ ಗ್ರಾಮದಲ್ಲಿ ಹೆಚ್ಚು ಜನರು ಕುರಿಗಳನ್ನು ಸಾಕಿದ್ದರು. ಒಂದರ್ಥದಲ್ಲಿ ಈ ಗ್ರಾಮವು ಕುರುಬ ಜನಾಂಗದವರೆ ಹೆಚ್ಚಿನ ಸಂಖ್ಯೆಯಲ್ಲಿರುವಂಥದ್ದಾಗಿತ್ತು. ಆದ್ದರಿಂದ ಸಂಜೆಯ ವೇಳೆ ಕುರಿಗಳು ಮೇಯ್ದು ಊರಿನೊಳಗೆ ಬರುತ್ತಿರುವಾಗ ಇಡೀ ವಾತಾವರಣ ಕುರಿಗಳ ಧ್ವನಿಯಿಂದಲೆ ತುಂಬಿರುತ್ತಿತ್ತು. ವಾತಾವರಣವೆಲ್ಲ ಧೂಳುಮಯವಾಗಿರುತ್ತಿತ್ತು. ಗ್ರಾಮೀಣರಲ್ಲಿ ಅಕ್ಷರತೆಯ ಪ್ರಮಾಣ ಬಹಳ ಕಡಿಮೆಯಿದ್ದಿತು. ಶಾಲಾವಯಸ್ಸಿನ ಮಕ್ಕಳು ಹೆಚ್ಚಾಗಿ ಕುರಿಕಾಯುವುದಕ್ಕೆ ಹೋಗುತ್ತಿದ್ದರು. ನಾವು ಈ ಗ್ರಾಮಕ್ಕೆ ಬಂದಾಗ ಅಲ್ಲಿ ಎಂ. ಕೃಷ್ಣಯ್ಯ ಎಂಬುವವರು ಗಾಂಧಿ ಸ್ಮಾರಕ ನಿಧಿಯ ಗ್ರಾಮಸೇವಕರಾಗಿ ಕೆಲಸಮಾಡುತ್ತಿದ್ದರು. ಅವರು ಅಲ್ಲಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಿ ಬಹಳಷ್ಟು ಸಹಾಯವನ್ನು ಗ್ರಾಮಸ್ಥರಿಗೆ ಮಾಡುತ್ತಿದ್ದರು. ಈ ಕಾರಣದಿಂದಾಗಿ ಅವರು ಕೆಂಪಿಸಿದ್ಧನ ಹುಂಡಿ ಮತ್ತು ಸುತ್ತಲ ಕೆಲ ಪ್ರದೇಶದಲ್ಲಿ ಜನಪ್ರಿಯರಾಗಿದ್ದರು. ಅವರ ಅಣ್ಣ ರಾಚಯ್ಯ ಎಂಬುವವರು ನಂಜನಗೂಡು ಪಟ್ಟಣದಲ್ಲಿ ಬಸ್‌ನಿಲ್ದಾಣದ ಬಳಿ ಕನಕದಾಸ ವಿದ್ಯಾರ್ಥಿನಿಲಯ ಎಂಬುವುದನ್ನು ಸ್ಥಾಪಿಸಿದ್ದರು. ಮತ್ತು ಕಾಂಗ್ರೆಸ್ ಪಕ್ಷದ ಶಾಸಕರಾಗಿ ರಾಜಕೀಯವಾಗಿಯೂ ಕೆಲಸಮಾಡುತ್ತಿದ್ದರು. ಆದ್ದರಿಂದ ಕೃಷ್ಣಯ್ಯನವರು ಸಹ ರಾಜಕೀಯ ಕ್ಷೇತ್ರದ ಕಡೆಗೆ ವಾಲುತ್ತಾ ಬಂದರು. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರೂ ಆದರು. ನಾನು ಮತ್ತು ಗಿರಿಜಾ ಕೆಂಪಿಸಿದ್ದನ ಹುಂಡಿಗೆ ಹೋದ ಕೂಡಲೆ ಕೃಷ್ಣಯ್ಯನವರನ್ನು ಭೇಟಿ ಮಾಡಿದೆವು ಅವರು ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಮತ್ತು ನಮಗೆ

ಇರುವುದಕ್ಕಾಗಿ ಕೆಲ ಸೌಕರ್ಯಗಳನ್ನು ಮಾಡಿಕೊಟ್ಟರು. ನಮ್ಮ ವಾಸಕ್ಕಾಗಿ ತಮ್ಮ ಮನೆ ಬಳಿ ಇರುವ ಹೊಂಬಯ್ಯ ಎಂಬ ಗ್ರಾಮಸ್ಥರ ಮನೆಯನ್ನು ಉಚಿತವಾಗಿ ಒದಗಿಸಿಕೊಟ್ಟರು. ಆ ಮನೆ ನಾಡಹೆಂಚಿನದಾಗಿತ್ತು. ಮತ್ತು ಮಧ್ಯದಲ್ಲಿ ತೊಟ್ಟಿ ಇತ್ತು. ಆ ತೊಟ್ಟಿಯಲ್ಲಿಯೆ ಹೆಂಚಿನ ಮೂಲಕ ಮಳೆ ನೀರು ಸಂಗ್ರಹವಾಗಿ ಹೊರಗೆ ಹೋಗುತ್ತಿತ್ತು. ಸ್ನಾನ ಮಾಡುವುದು, ಕೈ ಕಾಲು ತೊಳೆಯುವುದು ಆ ತೊಟ್ಟಿಯಲ್ಲಿಯೇ ಮಾಡಬೇಕಾಗಿತ್ತು ಸುತ್ತಲೂ ಕಂಬಗಳಿದ್ದವು, ಮಣ್ಣು ನೆಲ, ವಾರಕ್ಕೊಮ್ಮೆ ಕಡ್ಡಾಯವಾಗಿ ಸಾರಿಸಬೇಕಾಗಿತ್ತು. ವಿದ್ಯುತ್ ದೀಪದ ವ್ಯವಸ್ಥೆ ಇರಲಿಲ್ಲ. ಸಂಜೆಯಾದ ಕೂಡಲೆ ಸೀಮೆಎಣ್ಣೆಯ ದೀಪವನ್ನು ಹಚ್ಚಬೇಕಾಗಿತ್ತು. ಮೂಲೆಯಲ್ಲಿ ಒಂದು ಕೋಣೆಯಿತ್ತು. ಅದನ್ನೆ ಅಡುಗೆಮನೆಯನ್ನಾಗಿ ಮಾಡಿಕೊಂಡೆವು. ಶೌಚಾಲಯವಿಲ್ಲದೆ ಇದ್ದುದರಿಂದ ಮನೆಯಿಂದ ದೂರದಲ್ಲಿ ಒಬ್ಬರ ಹೊಲದಲ್ಲಿ ತಾತ್ಕಾಲಿಕ ಶೌಚಾಲಯವೊಂದನ್ನು ನಿರ್ಮಿಸಿಕೊಂಡೆವು. ಹಳ್ಳಿಗರೆಲ್ಲರು ಮನೆಯೊಳಗೆ ಬಂದು ಕುಳಿತುಕೊಂಡು ಬಹಳಷ್ಟು ಮಾತನಾಡುತ್ತಾ ಕಾಲಕಳೆಯುತ್ತಿದ್ದರು. ಹೀಗಾಗಿ ಅನೇಕ ಸಲ ಸ್ನಾನ ಇತ್ಯಾದಿಗಳಿಗೆ ಆ ತೊಟ್ಟಿಯನ್ನು ಉಪಯೋಗಿಸಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ಬೇರೊಂದು ಬಚ್ಚಲು ಮನೆಯನ್ನು ಕಟ್ಟಬೇಕಾಗಿ ಬಂತು. ಅದೇ ಮನೆಯಲ್ಲಿ ಮುಂಬಾಗಿಲಿನ ಪಕ್ಕದಲ್ಲಿಯ ಮೂಲೆಯಲ್ಲಿ ಒಂದು ಸಣ್ಣ ಬಚ್ಚಲುಮನೆಯನ್ನು ನಿರ್ಮಿಸಿದೆ. ಮುಂಬಾಗಿಲಿನ ಬಾಗಿಲೇ ಈ ಬಚ್ಚಲುಮನೆಗೆ ಬಾಗಿಲಾಗಿ ಉಪಯೋಗಕ್ಕೆ ಬರುವ ರೀತಿ ಬಚ್ಚಲು ಮನೆಯನ್ನು ನಿರ್ಮಿಸಿಕೊಂಡಿದ್ದೆವು. ಬಚ್ಚಲು ಮನೆಯ ನೀರು ಬೀದಿಯಲ್ಲಿ ಹರಿದು ಹೋಗಬಾರದೆಂದು ಪಕ್ಕದ ಓಣಿಯಲ್ಲಿ ಹೀರುಗುಂಡಿಯನ್ನು (ಸೋಕಪಿಟ್) ನಿರ್ಮಿಸಿದೆವು. ಕ್ರಮೇಣ ಗ್ರಾಮದಲ್ಲಿ ಸಾರ್ವಜನಿಕ ಕೆಲಸವನ್ನು ಪ್ರಾರಂಭಿಸಿದೆವು. ಗಾಂಧಿ ಸ್ಮಾರಕ ನಿಧಿಯವರು ಪ್ರತಿಯೊಬ್ಬ ಗ್ರಾಮ ಸೇವಕನಿಗೆ ಏಳಂಶದ ಕಾರ್ಯಕ್ರಮವನ್ನು ಕೊಟ್ಟಿದ್ದರು ಆ ಕಾರ್ಯಕ್ರಮಗಳಲ್ಲಿ ಪ್ರಮುಖವಾದವು ಗ್ರಾಮಸ್ವಚ್ಛತೆ, ಸಾಕ್ಷರತೆ ಪ್ರಚಾರ, ಶಿಶುಕಲ್ಯಾಣಕೇಂದ್ರ, ಗಾಂಧೀ ವಿಚಾರ ಪ್ರಚಾರ ಇತ್ಯಾದಿಗಳು ಸೇರಿದ್ದವು. ನಿಧಿಯವರು ಪ್ರತಿಯೊಬ್ಬ ಕಾರ್ಯಕರ್ತರಿಗೆ ೮ ಪ್ರಕಾರದ ಔಷದಿಗಳಿರುವ ಒಂದು ಪೆಟ್ಟಿಗೆಯನ್ನು ಕೊಟ್ಟಿದ್ದರು. ಈ ಔಷಧಿಗಳೆಲ್ಲವು ಸಸ್ಯ ಮತ್ತು ಖನಿಜಾಂಶಗಳಿಂದ ಕೂಡಿದುದಾಗಿದ್ದವು. ಯಾವ ಯಾವ ಕಾಯಿಲೆಗಳಿಗೆ ಯಾವ ಯಾವ ಔಷಧಿ ಕೊಡಬೇಕೆಂಬುದರ ಬಗ್ಗೆ ಒಂದು ಮಾರ್ಗದರ್ಶಿ ಪುಸ್ತಕವೂ ಇತ್ತು. ಒಂದು ವೇಳೆ ತಪ್ಪಾಗಿ ಔಷಧಿ ಕೊಟ್ಟರೂ ಯಾವ ಅಪಾಯವೂ ಇರುತ್ತಿರಲಿಲ್ಲ. ಈ ಔಷಧಿಗಳನ್ನು ಹೈದರಾಬಾದಿನಲ್ಲಿರುವ ಜೆ ಅಂಡ್ ಜೆ ಡಿಷೆನ್ ಕಂಪನಿಯವರು ತಯಾರಿಸಿದ್ದರು. ಕೆಮ್ಮು, ನೆಗಡಿ, ಕಜ್ಜಿ, ವಾಂತಿ–ಭೇದಿ ಇತ್ಯಾದಿ ಸಾಮಾನ್ಯ ಕಾಯಿಲೆಗಳಿಗೆ ಉಪಯೋಗವಾಗುವಂತ ಔಷಧಿಗಳಾಗಿದ್ದವು. ಗ್ರಾಮದಲ್ಲಿ ಚಿಕ್ಕಮಕ್ಕಳು ಮತ್ತು ದೊಡ್ಡವರೆಲ್ಲರೂ ಸಾಮಾನ್ಯವಾಗಿ ಕಜ್ಜಿಯಿಂದ ಬಳಲುತ್ತಿದ್ದರು ಯಾವಾಗಲೂ ಮೈ ಕೆರೆದುಕೊಳ್ಳುತ್ತಿದ್ದರು. ಹೀಗಾಗಿ ಕಜ್ಜಿಗಾಗಿ ಹೆಚ್ಚು ಜನ ಬಂದು ಔಷಧಿ ಪಡೆಯುತ್ತಿದ್ದರು. ರಾತ್ರಿ ಹೊತ್ತು ನಾನು ನಮ್ಮ ಮನೆಯಲ್ಲಿಯೆ ಲಾಟೀನು ಬೆಳಕಿನಲ್ಲಿ ಹಳ್ಳಿಯ ಕೆಲ ವಯಸ್ಕರರಿಗೆ ರಾತ್ರಿ ಪಾಠ ಶಾಲೆ ಪ್ರಾರಂಭಿಸಿದೆ. ಹಳ್ಳಿಯ ಕೆಲ ಚಿಕ್ಕ ಮಕ್ಕಳೂ ಸಹ ಸೇರಿಕೊಳ್ಳುತ್ತಿದ್ದರು ಎಲ್ಲರನ್ನೂ ಸೇರಿಸಿ ಆಶ್ರಮ ಪ್ರಾರ್ಥನೆಯನ್ನು ಹೇಳಿಕೊಡುತ್ತಿದ್ದೆ. ನಂತರ ಅಕ್ಷರಾಭ್ಯಾಸ ಮಾಡಿಸುತ್ತಿದ್ದೆ. ಎಲ್ಲರಿಗೂ ಎಷ್ಟು ಕಜ್ಜಿ ಇತ್ತೆಂದರೆ ಅವರಿಗೆ ಸ್ಲೇಟ್

ಮೇಲೆ ಅಕ್ಷರ ಬರೆಯಲೂ ಪುರುಷೋತ್ತಾಗುತ್ತಿರಲಿಲ್ಲ ಮೈಯನ್ನು ಪದೇಪದೇ ಕೆರೆದುಕೊಳ್ಳಬೇಕಾಗಿತ್ತು ಅದು ಅಂಟುರೋಗವಾಗಿದ್ದರಿಂದ ವಾಸಿ ಮಾಡುವುದು ಬಹಳ ಕಷ್ಟವಾಗಿತ್ತು. ಅವರಲ್ಲಿ ಯಾರೋ ಕೆಲವರು ನಂಜನಗೂಡಿಗೆ ಹೋಗಿ ಔಷಧಿ ತೆಗೆದುಕೊಳ್ಳುವ ಕಷ್ಟ ತೆಗೆದುಕೊಳ್ಳುತ್ತಿದ್ದರು. ಇನ್ನು ಬಹಳಷ್ಟು ಜನ ನಂಜನಗೂಡಿಗೆ ನಡೆದುಕೊಂಡು ಹೋಗಬೇಕಾಗುತ್ತದೆಂದೆ ಅಥವಾ ಬಡತನದ ಕಾರಣದಿಂದಲೆ ಔಷಧಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ. ಕೆಂಪಸಿದ್ಧನಹುಂಡಿಯಲ್ಲಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ವೈದ್ಯರಾಗಲಿ ಇರಲಿಲ್ಲ. ಹೀಗಾಗಿ ಗ್ರಾಮಸ್ಥರ ಕಜ್ಜಿಯ ಸಮಸ್ಯೆಯೆ ನನಗೆ ಒಂದು ದೊಡ್ಡ ಸವಾಲಾಯಿತು. ಅಲ್ಲದೆ ಆ ಹಳ್ಳಿಯಲೆಲ್ಲೂ ಚರಂಡಿ ವ್ಯವಸ್ಥೆ ಇರಲಿಲ್ಲ. ಎಲ್ಲರ ಮನೆಯ ಬಚ್ಚಲುನೀರು ಬೀದಿಗೆ ಹರಿದು ಬರುತ್ತಿತ್ತು. ಹೀಗಾಗಿ ಅಲ್ಲಲ್ಲಿ ನೀರಿನ ಮಡುವುಗಳುಂಟಾಗಿ ಸೊಳ್ಳೆಗಳ ಹಾವಳಿಯೂ ಹೆಚ್ಚಾಗಿತ್ತು.

ಇಂಥ ಹಿಂದುಳಿದ ಗ್ರಾಮದಲ್ಲಿ ನಾವು ಮದುವೆಯಾದ ತಕ್ಷಣವೆ ಬಂದುದು ನಮಗೊಂದು ರೀತಿಯ ಹೊಸ ಅನುಭವವಾಗಿತ್ತು. ಸಾಯಂಕಾಲದ ಹೊತ್ತು ಗಿರಿಜಾ ಮತ್ತು ನಾನು ಗ್ರಾಮಪ್ರದಕ್ಷಿಣೆಗೆ ಹೋಗುತ್ತಿದ್ದೆವು. ಹಳ್ಳಿಯ ಕೆಲವರು ನಮ್ಮನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು ಮತ್ತು ನಮ್ಮ ಪೂರ್ವಾಪರಗಳನ್ನೂ ಕೇಳುತ್ತಿದ್ದರು. ಹಳ್ಳಿಯ ಹೊರಗೆ ದೂರದಲ್ಲಿ ಒಂದು ಸಣ್ಣ ಗುಡ್ಡವಿತ್ತು. ಆ ಗುಡ್ಡವನ್ನು ಹತ್ತಿ ನಾವಿಬ್ಬರೂ ಸ್ವಲ್ಪ ಹೊತ್ತು ಕುಳಿತು ಬರುತ್ತಿದ್ದೆವು ನನಗೇನೂ ಹಳ್ಳಿಯ ಜೀವನ ಹೋಸದಾಗಿರಲಿಲ್ಲ ಹಳ್ಳಿ ಹಿಂದಿದ್ದಷ್ಟೂ ನನ್ನ ಉತ್ಸಾಹ ಹೆಚ್ಚಿರುತ್ತಿತ್ತು. ಆದರೆ ಹಳ್ಳಿಯಲ್ಲಿದ್ದುಕೊಂಡು ಕೆಲಸಮಾಡಿದ ಅನುಭವ ಇಲ್ಲದೆ ಇದ್ದಂಥ ಗಿರಿಜಾರವರಿಗೆ ಈ ಹಳ್ಳಿಯ ಜೀವನದಿಂದ ಬೇಸರವೆನಿಸಿತು. ಇಂಥ ಹಳ್ಳಿಯಲ್ಲಿ ಹೇಗಿರುವುದೆಂದು ಕಣ್ಣೀರನ್ನು ಸಹ ಹಾಕಿದರು. ನಾನು ಸಮಾಧಾನ ಹೇಳಿದೆ.

ಮುಂದುವರಿಯುವುದು.......

ಸಂತಾಪ

ಕಳೆದ ೩೦ ವರ್ಷಗಳಿಂದ ದಲಿತೋದ್ಧಾರಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದ, ತಮ್ಮ ಹೆಸರನ್ನು ಅನ್ವರ್ಥಗೊಳಿಸುವಂತೆ ಹೋರಾಟ ಮಾಡಿ ಕಳೆದ ಮಂಗಳವಾರ (೧೪-೦೩-೦೬) ದಂದು ತೀರಿಕೊಂಡ ಚಂದ್ರಪ್ರಸಾದ್ ತ್ಯಾಗಿಯವರ ನಿಧನಕ್ಕಾಗಿ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಸರ್ವೋದಯ ದೃಷ್ಟಿಯಿಂದ ವಿಶ್ಲೇಷಿಸಿ ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ಲೇಖನವು ಜನಪದ ವಿಚಾರದ ನಾಲ್ಕೈದು ಪುಟಗಳಿಗೆ ಸೀಮಿತವಾಗಿರುವಂತೆ ಇರಬೇಕೇಂಬುದಷ್ಟೆ ನಮ್ಮ ವಿನಂತಿ. ಈ ಲೇಖಕರ ಬಳಗಕ್ಕೆ ಸೇರಬಹುದಾದಂಥ ಸ್ನೇಹಿತರಿದ್ದರೆ ಅವರ ವಿಳಾಸವನ್ನು ತಿಳಿಸಬೇಕಾಗಿ ವಿನಂತಿ. ನೀವು ನಮ್ಮ ಈ ಕೋರಿಕೆಯನ್ನು ಮನ್ನಿಸುತ್ತೀರೆಂದು ನಂಬಿದ್ದೇವೆ ಮತ್ತು ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA-SKMND-470-2003-05
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com